ಷ್ಟ್ರಕವಿ ಗೋವಿಂದ ಪೈ

375

ಕಯ್ಯಾರ ಕಿಞ್ಞಣ್ಣ ರೈ


ಖರಾ ಮುಕ್ತೇಗಾಗಿ

ರಾಷ್ಟ್ರಕವಿ ಗೋವಿಂದ ಪೈ

ಕಯ್ಯಾರ ಕಿಞ್ಞಣ್ಣ ರೈ.

೧೯೫೦

ಬೆಲೆ: ಹನ್ನೆರಡಾಣೆ.



ಶ್ರೀ ಗೋವಿಂದ ಪೈ

ಪಡಿಯಚ್ಚು : —ಬಿ. ಶಂಕರ ಭಟ್ಟರಿಂದ

ರಾಷ್ಟ್ರಕವಿ ಗೋವಿಂದ ಪೈ

೧

ಕನ್ನಡದ ಕವಿಶ್ರೇಷ್ಠರಲ್ಲೊಬ್ಬರಾದ ಶ್ರೀ। ಪಾಂಡೇಶ್ವರ ಗಣಪತಿ ರಾಯರು ೧೯೪೦ರ ಸಾಲಿಗೆ ಪ್ರಕಟಪಡಿಸಿದ "ಚೆಂಗಲವೆ" ಎಂಬ ಕವನ ಸಂಗ್ರಹದಲ್ಲಿ "ಪಂಡಿತವಕ್ಕಿ"ಯನ್ನು ಸಂಬೋಧಿಸಿ ಹೀಗೆಂದು ಹಾಡೊಂದನ್ನು ಹಾಡಿದ್ದಾರೆ:

"ಇತಿಹಾಸ ಸೂತ್ರದಲಿ
ಕೋದ ಮುತ್ತುಗಳ,
ಸತ್ಯಮಿಥ್ಯಗಳ ಸಂ
ವಾದ ಬಿತ್ತುಗಳ,
ತಿಂದಿನಿಸು ತೃಪ್ತಿಯನು
ತೋರದಿದೆ ಹಕ್ಕಿ—
ಮುಂದಿರುವ ಮೃತ್ಯುವನು
ಕಾಣ ಕಣ್ಣಿಕ್ಕಿ!

ರನ್ನ ಪಂಪಾದಿಗಳ
ಕಾವ್ಯಕಾನನದ,
ಉನ್ನತೋನ್ನತ ವೃಕ್ಷ
ರಾಜಸಂಪದದ,
ನಿನ್ನೆಗಳ ನೆನೆನೆನೆದು
ಮರುಳಮೌನದಲಿ
ತನ್ನ ತಾನರಿಯುದೆಯೆ
ಶುಷ್ಕವ್ಯಾಜದಲಿ
ಹಾಡುವುದ ಮರೆತಿಂತು
ಕುಳಿತೆಯೋ ಹಕ್ಕಿ?
ಹಾಡಲರಿಯುದೆ ನಾವು
ಅಳುತಿಹೆವು ಬಿಕ್ಕಿ!"

ಇತಿಹಾಸದ ಇರುಳಲ್ಲಿ ಅದ್ದಿರುವ ಸತ್ಯಮಿಥ್ಯಗಳ ಸಂವಾದದ ಬಿತ್ತನ್ನು ತಿನ್ನುವುದರಲ್ಲಿಯೇ ತಲ್ಲೀನಗೊಂಡು ತನ್ನ ಮುಂದಿರುವ ಮೃತ್ಯು ವನ್ನೂ ಗಣಿಸದೆ, ತನಗೆ ಸಹಜವಾದ ಸವಿಗೊರಲ ಇಂಪಿನ ಹಾಡುವಿಕೆ ಯನ್ನೂ ಮರೆತು ಕುಳಿತಿರುವ 'ಪಂಡಿತವಕ್ಕಿ'ಯನ್ನು ಸಂಬೋಧಿಸಿ, ಕವಿ "ಕಾಮನೆಯ ಸಲಿಸು" ಎಂದು ಪ್ರಾರ್ಥಿಸಿಕೊಂಡಿದ್ದಾರೆ; ಆಶಿಸಿದ್ದಾರೆ; ಎಚ್ಚರಿಸಿದ್ದಾರೆ.

ಈ ಪ್ರಾರ್ಥನೆ, ಈ ಎಚ್ಚರ, ಶ್ರೀ। ಮಂಜೇಶ್ವರ ಗೋವಿಂದ ಪೈಗಳ ಕುರಿತು ಸಂಪೂರ್ಣ ಅನ್ವಯಿಸುತ್ತದೆ. ಕನ್ನಡದ ಹೊಸ ಹಾದಿಯ ಆದಿ ಕವಿಗಳಲ್ಲೊಬ್ಬರಾಗಿದ್ದು, ೧೯೩೦ರ ಸಾಲಿಗೆ, ತನ್ನ "ಗಿಳಿವಿಂಡು" ಎಂಬ ಪ್ರತಿಭಾಪೂರ್ಣ ಕವನಸಂಗ್ರಹವೊಂದನ್ನು ಪ್ರಕಾಶಪಡಿಸಿ, ವಿದ್ವಜ್ಜನರ ಮೆಚ್ಚುಗೆ ಪಡೆದಿದ್ದು, ಮುಂದೆ "ಗೊಲ್ಗೊಥಾ"ದಿಂದಲೂ "ನಂದಾ ದೀಪ"ದ ಬೆಳಕಿನಿಂದಲೂ ಕನ್ನಡದಲ್ಲೆಲ್ಲಾ ಪ್ರಭೆಬೀರಿದ ಕವಿ ಗೋವಿಂದ ಪೈಗಳು, ಅನಂತರ ಕೆಲವು ಕಾಲದ ವರೆಗೆ ಕವಿತೆ ಬರೆವುದನ್ನು ಬಿಟ್ಟೆ ಬಿಟ್ಟು, ಕೇವಲ ಇತಿಹಾಸದ ಸಂವಾದದಲ್ಲಿ ತಲ್ಲೀನರಾಗಿದ್ದರು. ಅಂತಹ ಸಂದರ್ಭದಲ್ಲಿ ಅವರ ಕಾವ್ಯಮಯ ವಾಣಿಯನ್ನು ಕೇಳಲು ಕನ್ನಡ ಲೋಕ ಶ್ರೀ। ಪಾಂಡೇಶ್ವರರ ಮೂಲಕ ಪ್ರಾರ್ಥಿಸುವುದೂ ಆಶಿಸುವುದೂ ಎಚ್ಚ ರಿಸುವುದೂ ಸಹಜವೇ ಆಗಿದೆ. ಈ ಬಿನ್ನಹ ವ್ಯರ್ಥವಾಗಲಿಲ್ಲ; ಮುಂದೆ ಅವರು ಹಲವಾರು ಕವಿತೆಗಳನ್ನು ಬರೆದರು. "ಹೆಬ್ಬೆರಳು" ಎಂಬ ಕಾವ್ಯಮಯ ನಾಟಕವೊಂದನ್ನೂ, 'ವೈಶಾಖಿ' ಎಂಬೊಂದು ಖಂಡಕಾವ್ಯ ವನ್ನೂ ಬರೆದು ಪ್ರಕಟಿಸಿದರು. ಇವೆರಡೂ ಕನ್ನಡ ಸಾಹಿತ್ಯಪ್ರಪಂಚದ ಅತ್ಯಂತ ಪ್ರತಿಭಾಮಯ ಕಾವ್ಯರತ್ನಗಳಾಗಿ ಪ್ರಜ್ವಲಿಸುತ್ತಿವೆ. "ಸವಿ ಗೊರಲ ಕೋಗಿಲೆಯು ಕಾಮನೆಯ ಸಲಿಸುತಿದೆ!"

ಇಂತಹ ಮಹಾಕವಿಯೊಬ್ಬರ ಕುರಿತು, ಅವರ ಕವಿವಾಣಿಯ ಕುರಿ ನಾಲ್ಕು ಮಾತು ಬರೆವುದು, ಕವಿಗೆ ನಾವು ಸಲ್ಲಿಸುವ ಗೌರವಕ್ಕಿಂತಲ ಕನ್ನಡಕ್ಕೆ, ನಮಗೇ ನಾವು ಮಾಡಿಕೊಳ್ಳುವ ಗೌರವವಾಗಿದೆ. ಏಕೆಂದ ಅವರು ಕನ್ನಡದಲ್ಲಿ ಎಂತು ನಿಷ್ಣಾತ ಕವಿಗಳೋ ಅಂತೆ ಆಂಗ್ಲ ಸಾಹಿ ದಲ್ಲಿಯೂ ಕೂಡಾ; ಹಾಗಿರುತ್ತ ಆಂಗ್ಲ ಸಾಹಿತ್ಯದ ಹಾದಿ ಹಿಡಿದಿದ್ದ

ಇಂದಿಗೆ ಅವರು ದಿಗಂತವಿಶ್ರಾಂತಕೀರ್ತಿಯನ್ನೂ ಸಾಕಷ್ಟು ಧನಮಾನಗಳೆರಡನ್ನೂ ಗಳಿಸಬಹುದಾಗಿದ್ದರೂ, ಕನ್ನಡದ ಮೇಲಿನ ವಿಶೇಷ ಮಮತೆಯಿಂದ ಕನ್ನಡ ಸಾಹಿತ್ಯದಲ್ಲಿಯೇ ತನ್ನ ಪ್ರತಿಭೆಯ ಪ್ರವಾಹ ಹರಿಯಿಸಿದ್ದು ಕನ್ನಡದ, ನಮ್ಮೆಲ್ಲರ ಹೆಮ್ಮೆಯಲ್ಲದೆ ಮತ್ತಿನ್ನೇನು?

೨

ಶ್ರೀಮಾನ್ ಗೋವಿಂದ ಪೈಗಳ ಮೊದಲ ಕವಿತಾಸಂಗ್ರಹ 'ಗಿಳಿವಿಂಡು'. ಇದು ೧೯೩೦ರ ಸಾಲಿಗೆ ಪ್ರಕಟವಾಗಿದೆ. ಅದರ ಮುನ್ನುಡಿಯಲ್ಲಿ ಅವರು ಬರೆದಂತೆ, ಹಿಂದಿನ ಮೂವತ್ತು ವರ್ಷಗಳಲ್ಲಿ ಅವರು ಆಗಾಗ ಬರೆದ ಕೆಲವು ಕವಿತೆಗಳನ್ನು ಅದರಲ್ಲಿ ಸಂಗ್ರಹಿಸಿ ಕೊಟ್ಟಿರುವರು. ಹಾಗೆಂದರೆ, ೧೯೦೦ರ ಸಾಲಿಗೇ ಅವರು ಕವಿತೆಗಳನ್ನು ಬರೆಯತೊಡಗಿದರೆಂಬುದು ವಿದಿತವಾಗುತ್ತದೆ. ಅಂತೂ ಕಳೆದ ಅರ್ಧ ಶತಮಾನದಿಂದ ಕವಿ ಗೋವಿಂದ ಪೈಗಳ ಕವಿತಾವಾಣಿ ಅಕುಂಠಿತವಾಗಿ ನವನೂತನವಾಗಿ ಮುಂದೆ ಸಾಗಿದೆ; ಸಾಗುತ್ತಲಿದೆ.

'ಗಿಳಿವಿಂಡು' ಕವನ ಸಂಗ್ರಹದಲ್ಲಿ ೪೫+೧ ಚಿಕ್ಕ ದೊಡ್ಡ ಕವನಗಳೂ, "ಉಮರ್ ಖಯ್ಯಾಮ್" ಎಂಬ ಒಂದು ಕಾವ್ಯ ಭಾಗವೂ ಸೇರಿದೆ. ಇದರಲ್ಲಿ ಹೆಚ್ಚಿನವು ಭಾವಗೀತೆಗಳು; ಕೆಲವು ರಾಷ್ಟ್ರಗೀತೆಗಳು; ಕೆಲವು ಅನುವಾದಗಳನ್ನುಳಿದರೆ ಎಲ್ಲವೂ ಸ್ವತಂತ್ರವಾದವುಗಳು; ಛಂದಸ್ಸು, ಭಾವನೆ, ಶೈಲಿ ಎಲ್ಲಾ ವಿಧಗಳಲ್ಲಿಯೂ ಸ್ವತಂತ್ರಗಳೇ; ಆದರೂ ಕವಿ, ವಿನಯ ಸರಳತೆಗಳಿಂದ ಹೀಗಂದಿದ್ದಾರೆ:

"ನನ್ನೆದೆಯೊಳರೆಗಳಿಗೆ ಉಲಿದುಲಿಸಿದಲ್ಲಿ
ನನ್ನವಾದಿರೆ? ನಿಮ್ಮನೆನ್ನವೆನಲೆಂತು?
ತೋಟವಾವುದನೊ ತಮ್ಮನುಪಥದಿ ಕಂಡು
ಕ್ಷಣವೆರಗಲಾ ತೋಟದಹುದೆ ಗಿಳಿವಿಂಡು?"

ಹೀಗೆ, ಲೌಕಿಕ ಪಾರಮಾರ್ಥಿಕಗಳಿಗೆ, ದೈವಿಕ ಮಾನವೀಯತೆಗಳಿಗೆ, ತ್ರಿಕಾಲಗಳಿಗೆ ಅನ್ಯೋನ್ಯವಿರುವ ಮಧುರ ಸಂಬಂಧವನ್ನಿಟ್ಟು, ಕವಿ, ಕಾವ್ಯ ಪ್ರಾರಂಭಿಸಿದ್ದಾರೆ. ಈ ಉದಾತ್ತ ದೃಷ್ಟಿ ನಮ್ಮ ಸಂಸ್ಕೃತಿಯ

ಹಿನ್ನೆಲೆಯದು; ಭಾರತಸಂಸ್ಕೃತಿ ಪ್ರಪಂಚಕ್ಕೆ ತೋರುವ ವರದಾನ ವಿದು.

ಗಿಳಿವಿಂಡಿನ ಮೊದಲ ಕವಿತೆ 'ಚಿಟ್ಟೆಗೆ' ಎಂಬುದು; ವರ್ಡ್ಸ್‌ವರ್ತ್ ಕವಿಯ ಆಂಗ್ಲ ಕವಿತೆಯನ್ನು ಅವಲಂಬಿಸಿ ಬರೆದುದಾಗಿದೆ. ಚಿಟ್ಟೆಯ ನೋಟದಿಂದ ಕವಿಗೆ ಬಾಲ್ಯದ ನೆನಹುಗಳು ಮರುಕೊಳಿಸುವವು:

"ಕಿರು ಬೇಡನಂತೆ ಪೊದೆ ಪೊದೆ ಸೋದು ನಿಮ್ಮ
ನರೆಬರನು ಹೊರವಡಿಸಿ ಹಿತ್ತಿಲೊಳಗೆಮ್ಮ,
ಸೆರೆವಿಡಿದು ಮುದ್ದು ತಂಗಿಗೆ ನೀಡಲವಳ್
ಗರಿಯ ದೂಳನು ಮೆಲ್ಲನೊರಸಲಳುಕುವಳು!"

"ಪರಮಾತ್ಮನೆಲ್ಲಿರುವನು?"—ಎಂಬೀ ಮುಂದಿನ ಪದ್ಯ ದ್ವಿಪದಿ ಛಂದಸ್ಸಿನಲ್ಲಿದ್ದು ದಾಸರ ಪದಗಳ ಧಾಟಿಯನ್ನು ಹೋಲುವುದಾಗಿ ನಮ್ಮ ನಾಡಿನ ಮಕ್ಕಳ ಬಾಯಲ್ಲಿ ನಲಿದು ತುಂಬಾ ಪ್ರಸಿದ್ಧಿಗೆ ಬಂದಿದೆ. ಪರ ಮಾತ್ಮನು ಯಾರು, ಆತನು ಎಲ್ಲಿರುವನು? ಎಂಬುದಿದು ಅನಾದಿಯಿಂದ ಬಂದ ಪ್ರಶ್ನೆ. ಲೌಕಿಕರಿಂದ ವೇದಾಂತಿಗಳ ತನಕ, ಪಾಮರರಿಂದ ಪಂಡಿತ ವರೆಗೆ ಚಿರಂತನ ಚರ್ಚಾ ವಿಷಯ; ಕವಿ ಪರಮಾತ್ಮನು ಎಲ್ಲಿರುವ ನೆಂಬುದಕ್ಕೆ ಗಹನ ವೇದಾಂತದ ವಾದವನ್ನು ಹೂಡುವುದಿಲ್ಲ; ಅತ್ಯಂತ ಸರಳವಾದ ಸರಣಿಯಲ್ಲಿ ಅದನ್ನು ತಿಳಿಸುತ್ತಾರೆ: ಅಣುರೇಣು ತೃಣ ಕಾಷ್ಟಗಳಲ್ಲಿ ಆತನಿದ್ದಾನೆ; ಸೂರ್ಯನಲ್ಲಿ ಆತನೇ ಇರುವನು; ಚುಕ್ಕಿಗಳ ರೂಪಿಂದ ನೋಡುತ್ತಿರುವನು; ತಂಬೆಲರಲ್ಲಿ ಉಸುರು ಬಿಡುತ್ತಿದ್ದಾನೆ ಹಳ್ಳದಲ್ಲಿ ಮೆಲ್ಲಡಿಯಿಡುವನು; ದೆಸೆಗಳನು ತೆರೆದು ಕಿವಿಯಾರೆ ಕೇಳ ತ್ತಿದ್ದಾನೆ; ಅರಳಿದ ಸುಗಂಧ ಪುಷ್ಪದಲ್ಲಿ ಮುಗುಳುನಗುತ್ತಿದ್ದಾನೆ. ಇತ್ಯಾ ದಿಯಾಗಿ ಪ್ರಕೃತಿಯ ಸುಂದರ ಸಾಮೀಪ್ಯದಲ್ಲಿ ಪರಮಾತ್ಮನನ್ನು ಕ "ಕಣ್ಣುಗಳನು ತೆರೆದವರ್ಗೆ" ತೋರಿಸುತ್ತಾರೆ! ಕವಿ ದೃಷ್ಟಿಗೆ ದೇವ ಇಂತು ಸರ್ವತ್ರ ಸಹಜ ರೀತಿಯಿಂದ ಕಾಣುತ್ತಿದ್ದಾನೆ. ಎಂತಹ ಗಹ ವೇದಾಂತ, ಎಷ್ಟು ಲಲಿತವಾಗಿ ಇಲ್ಲಿ ತಿಳಿಸಲ್ಪಟ್ಟಿದೆಯೆಂಬುದನ್ನು ನಾ ಅರ್ಥ ಮಾಡಬಹುದಾಗಿದೆ.

ಅನಂತರದ 'ಬಾನಕ್ಕಿಗೆ' ಎಂಬ ನೀಳ್ಗವಿತೆಯು ಶೆಲ್ಲಿ ಕವಿಯ 'ಟ

ಸ್ಕೈಲಾರ್ಕ್' ಎಂಬ ಕವಿತೆಯ ಅನುವಾದ. ಮೂಲದಂತೆ ಅನುವಾದವೂ ಭಾವಅರ್ಥಗರ್ಭಿತವಾಗಿದೆ. ಧ್ವನಿಕಾವ್ಯಕ್ಕೆ ಇದೊಂದು ಉತ್ತಮ ನಿದರ್ಶನವಾಗಿರುವುದು.

"ಸವಿಸೊಗಸು ದನಿಯುಖಿಲ
ಕವಿತೆಯಿಂ, ಕವಿತೆಯೊಳ
ಗವಿತಿರುವ ಬಗೆಬಗೆಯ ನಿಧಿನಿಚಯುದಿಂ,
ಕವಿಗೆಗಡ ನಿನ್ನ ಜಾ
ಣುವೆಯೆನಿತೊ ವಾಸಿಯು
ಲ್ಲವೆ? ನೆಲವ ಧಿಕ್ಕೆಂದು ಮಿಕ್ಕಿದವನೆ?"

ಬಾನಕ್ಕಿಯ ಜಾಣುವೆಯು ಕವಿಗೆ ಸೊಗಸಾದ ಕವಿತೆಗಿಂತಲೂ, ಕವಿತೆಯೊಳಗಿನ ತಿರುಳಿಗಿಂತಲೂ ಮಿಗಿಲಾಗಿದೆ; ಏಕೆಂದರೆ ಅದರ ಸ್ಮರಣೆ ಕವಿಗೆ ಉನ್ನತ ಸ್ಫೂರ್ತಿಯನ್ನಿತ್ತಿದೆ! ಆದ್ದರಿಂದಲೇ ಕವಿ ಅದರೊಡನೆ ಕೇಳಿಕೊಳ್ಳುತ್ತಾರೆ:

"ಅರುಹೆನಗೆ ನಿನ್ನ ಮನ
ಮರಿತ ಹರುಷದೊಳರೆಯು,
ನೆರಮೇಳತಾನನಮಾಂತೊರೆಯುತಣಾಂ
ಬಿರಿಡೆನ್ನ ತುಟಿವರಿಯೆ,
ತಿರೆಯುದಂ ಕೇಳೆ ಕಿವಿ
ದೆರೆವುದಂದೀಗಳಾಂ ಕೇಳುವಂತೆ."

ಬಾನಕ್ಕಿಯೊಡನೆ ಕವಿ ಕೇಳಿದ ಕೇಳಿಕೆಯನ್ನು, ಈ ಹಾಡುಹಕ್ಕಿಯೊಡನೆ, ಈ ಪಂಡಿತವಕ್ಕಿಯೊಡನೆ ನಾವೂ ಕೇಳುತ್ತಿದ್ದೇವೆ.

'ಹಿಂದುಸ್ತಾನ್ ಹಮಾರಾ' ಎಂಬ ಕವಿತೆ ಇಖ್ಬಾಲರ ಉರ್ದು ಕವಿತೆಯ ... ಜಲನ್ನು ಅವಲಂಬಿಸಿ ಬರೆದ ರಾಷ್ಟ್ರಗೀತೆ. ಭೂಮಂಡಲದಲ್ಲಿ ರಮಣೀಯವಾದ ದೇಶ ನಮ್ಮ ದೇಶ; ನಾವು ಈ ಭಾರತ ಜನನಿಯ ಮರಿದುಂಬಿಗಳಾಗಿದ್ದೇವೆ; ನಾವೆಲ್ಲಿದ್ದರೂ ನಮ್ಮ ಹೃದಯ ಈಕೆಯ ಪದತಲದಲ್ಲಿದೆ; ನೂರಾರು ನದಿಬಾಲೆಯರು ಇವಳಂಕದಲ್ಲಿ ನಲಿಯುತ್ತಿದ್ದಾರೆ; ನಮ್ಮ ಧರ್ಮಗಳು ದ್ವೇಷಬುದ್ಧಿಯನ್ನು ಬೋಧಿಸಲಾರವು; ನಾವೆಲ್ಲರೂ ಭಾರ

ತೀಯರು. ಹಾಗಾಗಿ ನಮ್ಮ ನಿತ್ಯದ ಪ್ರಾರ್ಥನೆ ಭಾರತಜನನಿಯೊಡನೆ ಇದೊಂದಾಗಿದೆ:

"ನಿನ್ನ ನಾಮವನೆ ಪಾಡುವೆವು,
ನಾವಿದನೊಂದನೆ ಬೇಡುವೆವು:
ನಮ್ಮನಿಂತೆ ಜನುಮಜನುಮದಿ
ನಿನ್ನುದರದಿ ತಳೆಯೌ ಜನನಿ"

ಇಂತಹ ಅನನ್ಯ ದೇಶಪ್ರೇಮವೇ ನಮ್ಮ ರಾಷ್ಟ್ರಕ್ಕೆ ಬಿಡುಗಡೆಯನ್ನು ತಂದಿತು; ಇಂತಹ ಉತ್ಕಟ ದೇಶಭಕ್ತಿಯೇ ನಮಗೆ ಶಕ್ತಿಯನ್ನಿತ್ತು ಪಡೆದ ಬಿಡುಗಡೆಯನ್ನು ಉಳಿಸಿಕೊಳ್ಳುವಂತೆ ಮಾಡಬಲ್ಲುದಾಗಿದೆ. ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಕಾಲ, ಠಾಕೂರ್ ಇಖ್ಬಾಲರಂತಹ ಮಹಾಕವಿಗಳು ಅಖಿಲ ಭಾರತದಲ್ಲಿ ದೇಶಾಭಿಮಾನದ ನಂದಾದೀಪವನ್ನು ಬೆಳಗಿಸುತ್ತಿದ್ದರೆ, ನಮ್ಮ ಕನ್ನಡನಾಡಿನಲ್ಲಿ ಗೋವಿಂದ ಪೈ, ಬೇಂದ್ರೆ, ಪುಟ್ಟಪ್ಪರಂತಹ ಕವಿಶ್ರೇಷ್ಠರು ಸ್ಫೂರ್ತಿಯ ಸೊಡರು ಹಚ್ಚುತ್ತಾ ಬಂದರು.

''ವಿದಾಯ"ವೆಂಬೊಂದು ಕವನ ಠಾಕೂರರ 'ಫಾರ್‌ವೆಲ್' ಕವಿತೆಯನ್ನು ಅನುವರ್ತಿಸಿ ಬರೆದುದಾಗಿದೆ. ತಾಯಿಯನ್ನಗಲುವ ಮಗುವಿನ ಮಾತು ಬಹಳ ಕರುಣಾಜನಕ ಮತ್ತು ಮಾರ್ಮಿಕವಾಗಿರುವುದು. ಅಗಲುವ ಮಗು ತಾಯಿಯೊಡನೆ ಹೇಳುತ್ತದೆ:

ನಾನು ಎಲರುಸಿರಿಂದ ನಿನ್ನೆದೆಯಲ್ಲಿ ನಿಡುಸುಯ್ವೆನು; ನೀರಿನ ಕಿರಿದಾದತೆದೆರೆಯಾಗಿ ಮೀಯುವ ನಿನ್ನನು ಬಲಂದು ಮುರಿ ಮುರಿದು ಅಪ್ಪಿಕೊಳ್ಳುವೆನು; ಇರುಳಲ್ಲಿ ನೀನು ಮನೆಯಲ್ಲಿ ಒಂಟಿಮಲಗಿರಲು ತಟತಟಕು ತನಿಮಳೆಯಿಂದ ತೊದಲಾಡುವೆನು. ಆಗ ನೀನು ಮುಚ್ಚಲು ಮರೆತ ಕಿಟಿಕಿಗಳನ್ನು ಮುಚ್ಚಿದರೆ ಮಿಂಚಿನಮಿಟುಕುಗಳಿಂದ ಮಿಂಚುವೆನು; ತಾರೆಯಾಗಿ ನೋಡುವೆನು; ಚಂದ್ರನ ಸೊದೆಗದಿರಾಗುವೆನು. ಕನಸಿನಲ್ಲಿ ನಿದ್ರಿಸುವ ನಿನ್ನನ್ನು ಮುದ್ದಿಸುವೆನು; ಹೀಗಾದ ಕಾರಣ,

ಎಲ್ಲೆಲ್ಲಿಯೂ ನನ್ನ ಮಗುವಿಹುದು,
ನೋಡೆನ್ನಯ ಕಣ್ಣಾಲಿಯದು,

ಎನ್ನಯ ಮೊಲೆಯ ಕುಡಿಯುತಿಹುದು
ಎನ್ನಂಕದಲಿ ಕುಳಿತಿಹುದು.

ಎಂದು ನೀನು ತಿಳಿದುಕೊ; ನನ್ನನ್ನೀಗ ಮುದ್ದಿನ ತಾಯೆ ಪೋಗಗೊಡು"

—ಇಂತು ರವೀಂದ್ರವಾಣಿಯಲ್ಲಿ ಸುಂದರವಾಗಿ ಬಂದ ತಾಯಿ ಮಗುವಿನ ಅಗಲುವಿಕೆಯ ಭಾವನೆಯನ್ನು ಗೋವಿಂದ ಪೈಗಳು ಬಹಳ ಚಂದವಾಗಿ ಕನ್ನಡಿಸಿ ತೋರಿಸಿದ್ದಾರೆ:

'ಹಾಳರ್ಧ ಹೊಲೆಯರೆಂದು, ಬೀಳರ್ಧ ಹೆಣ್ಣು ಎಂದು' ನಮ್ಮ ದೇಶ ಹಾಳಾಗಿ ಹೋಯಿತು! ಆದರೆ ನಿಜವಾಗಿ 'ಹೊಲೆಯನು ಯಾರು?' ಎಂಬುದನ್ನು ಇನ್ನೊಂದು ಕವಿತೆಯಲ್ಲಿ ತಿಳಿಸುತ್ತಾರೆ.

'ಹೊಲೆಯನಾರೂರ ಹೊರಗಿರುವವನೆ ಗೆಳೆಯ?
ಜಾತಿಯಿಂದಲ್ಲ ಗುಣದಿಂದವನು ಹೊಲೆಯ'

ಎಂದು ಪ್ರಾರಂಭಿಸಿ, ಗುಟ್ಟು ಕದ್ದು ಕೇಳುವವನು, ಗಂಡ ಹೆಂಡಿರನ್ನು ಬೇರೆ ಮಾಡುವವನು, ಚಾಡಿ ಹೇಳುವವನು, ಒಣ ಹರಟೆ ಹೊಡೆಯುವವನು, ಪ್ರಾಣಿಹಿಂಸೆ ಮಾಡುವವನು, ಹೆಂಡ ಕುಡಿಯುವವನು, ಜೂಜಾಡುವವನು, ಪರಸ್ತ್ರೀ ಪರಧನಗಳನ್ನಾಶಿಸುವವನು, ವಿದ್ಯೆಹೇಳಿಕೊಡದವನು, ದುರ್ಬುದ್ಧಿ ಕಲಿಸುವವನು, ಪರಪೀಡಕನು, ಸಾಲ ತೀರಿಸದವನು, ಮಾತು ಕೊಟ್ಟು ತಪ್ಪುವವನು, ತಾನು ಶುದ್ಧನೆಂಬವನು ಇವರೆಲ್ಲರೂ ಹೊಲೆಯರು, ಎಂದು ಮೊದಲಾಗಿ ಹೇಳಿ, ಕೊನೆಗೆ—

"ರಾಷ್ಟ್ರದುನ್ನತಿಯ ಸಾಧಿಸೆ ಶ್ರಮಿಸದವ ಹೊಲೆಯ,
ತನ್ನ ರಾಷ್ಟ್ರಕೆ ದ್ರೋಹ ಚಿಂತಿಪನೆ ಹೊಲೆಯ,
ಸ್ವಾರ್ಥದಿಂ ರಾಷ್ಟ್ರ ಹಿತವನು ಮರೆವವನು ಹೊಲೆಯ,
ರಾಷ್ಟ್ರಭಕ್ತಿಯು ಲೇಶವಿಲ್ಲದವ ಹೊಲೆಯ"

ಎಂದು ಸಾರಿದ್ದಾರೆ. ಮಡಿವಂತರೆಂದು ಡಂಭಾಚಾರ ಮಾಡುತ್ತಾ ಇತರರನ್ನು ಹೀನೈಸುವವರಿಗೆ ಬೆತ್ತದ ಏಟು ಏರಿಸಿದ್ದಾರೆ!

ದೀನತುರುಷ್ಕ ಶ್ರಿಪಲಿಯ ಮೇಲೆ ಇತೆಲಿಯು ಸೊಕ್ಕಿ ದಬ್ಬಾಳಿಕೆ ನಡೆಸುವ ಸಂದರ್ಭದಲ್ಲಿ 'ತುರ್ಕಿಯ ಪರವಾಗಿ ದೇವರೊಡನೆ ಪ್ರಾರ್ಥನೆ' ಪದ್ಯ ಬರೆಯಲಾಗಿದೆ. ಇದನ್ನು ಭಾರತವು ಪರತಂತ್ರವಾಗಿ ನರಳುತ್ತಿದ್ದ

ಕಾಲವಲ್ಲಿ ಬರೆದುದೆಂಬ ಹಿನ್ನೆಲೆಯಿಂದ ಓದಿದರೆ ಇನ್ನಷ್ಟು ಹೃದಯ ಸ್ಪರ್ಶಿಯಾಗುವುದರಲ್ಲಿ ಸಂಶಯವಿಲ್ಲ.

"ಆಧುನಿಕ ರಾಜ್ಯಕಲೆ
ಯನ್ನರಿಯದವರಸಲೆ
ಬೆಂಬಲಿಸಿ ನೀನಿಂದು ನಡೆಸವರ ಪಡೆಯಾ!
ಅನುಕರಿಸಗತಿಕರನು
ತೊರೆಯದಿರಪಥಿಕರನು
ಸುಕ್ಕಿಸದಿರರ್ಧಚಂದ್ರಧ್ವಜವನೊಡೆಯಾ!"

ಅಂದು ತುರ್ಕಿಯ ಪರವಾಗಿ ದೇವರೊಡನೆ ಇಟ್ಟ ಮೊರೆ, ಭಾರತದ ಪರವಾಗಿಯೂ ಆಗಿರಲಿಲ್ಲವೇ? ಇಂದಿನ ಕೊರಿಯದ ಪರವಾಗಿಯೂ ಆಗಿಲ್ಲವೇ?

"ಈ ಸಮರವನು ಮುಗಿಸು
ಸೊಕ್ಕಿದವರನು ತಗಿಸು
ಸ್ನೇಹಮಳೆಗರೆದು ಶಾಂತಿಯ ಬೆಳೆಯಿಸಿನಿಯಾ
ನಿರಪರಾಧಿಯ ರಕ್ತ
ದಿಂದ ನೆಲಜಲಸಿಕ್ತ
ವಾಗದೊಲುಕಾಪಾಡು ದೇವಕೀತನಯಾ!

ಇಂತಹ ಪ್ರಾರ್ಥನೆ ಶಾಂತಿಪ್ರಿಯರಿಂದ ಜಗದ ಅನಾದಿ ಕಾಲದಿಂದಲೂ ಕೇಳಿಬಂದಿದೆ; ಆದರೀ ಅರಣ್ಯರುದಿತಕೆ, 'ಶಾಂತಿ ಸ್ಥಾಪನೆ ಗಾಗಿ' ಆಟಂ ಬಾಂಬು ಹಿಡಿದು ನಿಂತ ಜನ ಕಿವಿಗೊಡುವುದುಂಟೆ? ಅಥವಾ, ಕಿವಿಗೊಡದಿದ್ದರೆ ಲೋಕಶಾಂತಿಯುಂಟೆ?

ನೆನಸು ಕಸಸು ಮನಸಿನ ತ್ರಿವೇಣೀ ಸಂಗಮವಾದ ಕವಿತೆಯ ಕುರಿತು ಬರೆದ 'ಕವಿತೆ'ಯೆಂಬ ಪದ್ಯದಲ್ಲಿ,

'ಕವಿತೆಮತಿಜಲನಲಿನ
ವ್ಯಸನವನಧಿಯ ಪುಲಿನ
ಕವಿತೆಗಾನದ ಸುಗ್ಗಿ'—

ಎಂದು ಪ್ರಾರಂಭಿಸಿ, ಅದೇ

'ಧ್ಯಾನಗನಿಗಳರನ್ನ
ಪ್ರಣಯಭಿಕ್ಷುವಿಗನ್ನ
ಕವಿತೆ ಜೀವನ ಸಮರಯೋಧರ ತುತೂರಿ'

ಎಂದು ಕವಿತೆಯ ಕಾರ್ಯಕ್ಷೇತ್ರವನ್ನು ತಿಳಿಸಿ, ಅಂತಹ ಕವಿತೆಯನ್ನು ಬರೆಯುವ ಕವಿಯ ಕುರಿತು ಹೀಗೆ ಹೇಳಿದ್ದಾರೆ:

"ಕವಿಗಿಂತ ಪಗೆಯಿಲ್ಲ
ಪರವಶತೆ ಬಗೆಗೆಲ್ಲ—
ಕವಿಯೆ ಸ್ವಾತಂತ್ರ್ಯಮಧುಕುಡಿವಮಧುಕರನು;
ಆದಿಕವಿ ಹರಿಯಿಂದ
ಕಲಿತು ಪರಿಪರಿಯಿಂದ
ಪರಹಿತವ ಬೆದರದೆಸಗುವನೆ ಕವಿವರನು."

ಎಂಬ ಚಿರಂತನ ಸತ್ಯವಾಣಿಯನ್ನು ಸಾರಿದ್ದಾರೆ.

'ವಿಶ್ವಾಂಜಲಿ' ದೇವರ ಮಹಿಮೆಯನ್ನು ಪೊಗಳುವುದಾಗಿದೆ; ಕವಿಗೆ ದೇವರ ದರ್ಶನ ಪ್ರಕೃತಿಯ ಸೌಂದರ್ಯಾನುಭವದಲ್ಲಿಯಲ್ಲದೆ ಬೇರೆ ಯಿಲ್ಲ; ದೇವರೊಡೆತನದ ಪತಾಕೆಯಂತೆ ಹರಿಯುವ ಗಗನತಲವಿದೆ; ದಿನಕರನು, ಬೆಳಕುಗಳ ತುತೂರಿಯನ್ನು ಊದಿ ದೇವರ ಪ್ರತಾಪವನ್ನು ಸಾರುತ್ತಾನೆ; ಕಬ್ಬಿಗರರಸಿಯಾದ ರಜನಿ ನಕ್ಷತ್ರಗಳ ವಾಲೆಗಳನ್ನು ತೆರೆದಿರಿಸಿ ಅಮೃತದ ದೀವಿಗೆಯನ್ನು ಬೆಳಗಿಸಿ ದೇವರ ಲೀಲೆಗಳನ್ನು ಹಾಡುತ್ತಾಳೆ. ಇಂತು, ಮೊರೆವ ಗಾಳಿಯಲ್ಲಿ, ಹರಿವ ನದಿಕಂಠದಲ್ಲಿ, ಜಲಧಿಯ ಕೆಯ್ಗನ್ನಡಿಯಲ್ಲಿ ಎಲ್ಲೆಲ್ಲಿಯೂ ದೇವರ ದರ್ಶನವಿರುವುದರಿಂದ,

'ಬಗೆ ಬಗೆಯಿಂದಾರಾಧಿಸಲರಿಯೆ;
ಮಗು ತೊದಲುಲಿವೊಲು ತಾಯನು ಕರೆಯೆ,
ಉಲಿವೆನು ಮಗುಳ್ದುಲಿವೆನು ಶ್ರೀ ಹರಿಯೆ
ನಿನ್ನ ನಾಮವನು.'

ಹೀಗೆ ಜಗದ ಪ್ರಭುವಿಗೆ 'ವಿಶ್ವಾಂಜಲಿ'ಯನ್ನು ಅರ್ಪಿಸಿದ್ದಾರೆ.

'ಹಳೆಯ ನಾಣ್ಯ' ಎಂಬುದೊಂದು ನೀಳ್ಗವಿತೆ; ಭಾವಗೀತೆ. ಹಳೆಯ ನಾಣ್ಯವು ಕವಿಗೆ ತನ್ನ ಮುಸುಕು ಮೌನವನ್ನು ತೊರೆಯದೆ ಮುಚ್ಚಾಲೆಯಾಡಿದೊಲ್ಲಯಿಸುತ್ತದೆ. ಆದ್ದರಿಂದಲೇ,

"ಸೊಲ್ಲಿಲ್ಲದುಲಿಗಳಿಂದುಲಿವ ನಿನ್ನಯ ಸೊಲ್ಲ
ಸೆಲೆಯಿಂದ ಹಾಡುಲಿಯ ಬಲ್ಲುದೇನೆನ್ನ ?"

ಎಂದು ಕವಿ ಹಳೆಯ ನಾಣ್ಯವನ್ನು ಕಂಡು ಸ್ಫೂರ್ತಿಗೊಂಡು ಹಾಡಿದ್ದಾರೆ. ಈ ಸ್ಫೂರ್ತಿ ಚರಿತಕಾರನಾದಂತಹ ಈ ಕವಿಗೆ ಅತ್ಯಂತ ಸಹಜವೇ ಆಗಿದೆ.

ನೀನೆನಿತೊ ಚರಿತಕಾರನಿಗೀವೆ ಸಂತಸವ !—

* * * * *

ನನಸು ಕನಸುಗಳ ದರ್ಶನವನೇಂತರಲಾರೆ,
ಬಿಂಗುಸುಬು ಬಂಗಾರದಿರವನೊರೆವಂತೆ ?
ಹಸರು ಮಸಿಯಿಂ ಬರೆದುದಿದರ ಬಿನ್ನಣವೇಂ ?
ನಿನ್ನ ಕವನಕೆ ಕಾಲನಿಟ್ಟ ಟಿಪ್ಪಣವೇಂ ?
ಮುನ್ನ ನಿಂದಿಗೆ ಸಾಲವಿತ್ತ ಬರವಣವೊ ?
ನಿಚ್ಚತೆಗೆ ನಮ್ಮನೋಲಯಿಸುವವುತಣವೊ ?"

ಆದರೂ ಕೊಳೆಹಿಡಿದು ಮಣ್ಣು ಮುಕ್ಕಿ ಬಿದ್ದ ಆ ಹಳೆಯ ನಾಣ್ಯದಲ್ಲಿ ಏನು ಚೆಲುವಿದ್ದೀತೆಂದು ಯಾರಾದರೂ ಶಂಕಿಸಬಹುದು; ಕವಿ ಅದಕ್ಕೆ ತಕ್ಕ ಉತ್ತರ ಕೊಡುತ್ತಾರೆ:

'ಕಂಡ ಚೆಲುವಿನಿದು, ಕಾಣದ ಚೆಲುವು ಮಿಗಿಲೆನಲು,
ಕನಸು ಕಂಗಳಿಗೆ ಸಿಲುಕದ ಚೆಲುವು ಕಿರಿದೆ ?
ಅದು ಕತದಿ ನಿನ್ನ ಸಸಿನೆದೆಯೊಳೋರೆಮೆಯ ನಲು
ಮೆಯನೀಡ! ಕನಸುಕಾಂಬೆಸು ನಿನ್ನನಿರದೆ!'

'ಕಾಲ ರೆಕ್ಕೆಯ ಕಾಲನಿಂದುದಿರ್ದಗರಿ' ಯಾದಾ ನಾಣ್ಯದ ಕುರಿತು ಕವಿ ಕಂಡ ಕನಸು ಈ ಕವಿತೆಯಾಗಿ ಹರಿಯಿತು! ಹಳೆಯ ನಾಣ್ಯವೊಂದು ಈ ಒಸಗೆಯಿಂದ ನಮ್ಮನೆಚ್ಚರಿಸಿತು:

"ಮೌನದಿಂ ನಿನ್ನೊಳಗು ನನ್ನಿಯಿಂ ನೋಡು,
ತಾನ್ಮೆಯಂಬಿರಿದು ತಾಳ್ಮೆಯಿನದಂ ಕೂಡು!—
ಚಿಪ್ಪಿನಾ ಮುಚ್ಚಿಕೆಯೊಳುಪ್ಪಹುದುಮುತ್ತು,
ಕತ್ತಲಿಂ ತಾಳ್ದಿರುಳು ಮೂಡುವುದು ಹೊತ್ತು!"

"ಕವಿತಾವತಾರ" ಎಂಬುದು ಆದಿ ಕವಿಗೆ, ದುರುಳ ನಿಷಾದನೊಬ್ಬನು ಕ್ರೌಂಚಯೆಣೆಯನ್ನ ಸೆಯಲು, ಕನಿಕರ ಕನಲಿ, ವಾಣಿಯ ವೀಣೆ ಗದ್ಗದಿಸಲು, ಬಾಷ್ಪಗಾನವು ಮುಂತೇಲಿದ ವಿಷಯವಾಗಿ ಬರೆದೊಂದು ಚತುರ್ದಶಪದಿ. ಶ್ರೀ. ಗೋವಿಂದ ಪೈಗಳೂ, ತನಗೆ ಕವಿತಾವತಾರವಾದ ವಿಷಯ ಈ ರೀತಿ ಹೇಳಿಕೊಂಡಿದ್ದಾರೆ:

ಚಿಕ್ಕಂದು ಒಮ್ಮೆ, ಅವರ ಮನೆಯಲ್ಲಿ ಯಾವುದೋ ಒಂದು ವಿಶೇಷ ದಿನ ಮನೆಯ ಹೆಂಗುಸರು ಹಾಡುವ ಈ ಹಾಡನ್ನವರು ಕೇಳಿದರು:

ಅಡವಿಗೆ ಪೊಪರೇನೇ?—ಕಂದಯ್ಯ
ಅಡವಿಗೆ ಪೊಪರೇನೇ?
ಅಡವಿಯೊಳಗೆ ಬಲು
ಕಡುಕ್ರೂರ ಮೃಗಗಳು
ಬಿಡದೆ ಬಾಧಿಪವು ನಿನ್ನ—ಕಂದಯ್ಯಾ,
ಅಡವಿಗೆ ಪೋಪರೇನೆ?

—ಈ ಹಾಡಿನ ಸೊಲ್ಲು ಪೈಗಳ ಹೃದಯವನ್ನು ಅಲುಗಿಸಿತು; ಅವರಿಗೂ ಕವಿತೆ ಬರೆಯುವ ಆಸೆ ಉಂಟಾಯಿತು; ಆದಿ ಕವಿಯಾದ ವಾಲ್ಮೀಕಿಗೆ ಯಾವ ಕರುಣೆ ಕವಿತೆಯ ಪ್ರೇರಕ ಶಕ್ತಿಯಾಯಿತೋ, ಅದೇ ಕರುಣೆ, ನಮ್ಮ ರಾಷ್ಟ್ರಕವಿಗೂ ಪ್ರೇರಕವಾಯಿತೆಂಬುದು ಅತ್ಯಂತ ಗಮನಾರ್ಹವಾದ ವಿಷಯವಾಗಿದೆ.

"ಭಾರತ ಭಾಗ್ಯವಿಧಾತಾ" ಹಾಡು ಒಂದು ರಾಷ್ಟ್ರಗೀತೆ. ಭಾರತದ ಭಾಗ್ಯ ಬ್ರಹ್ಮನನ್ನೊ, ಮಹಾತ್ಮನನ್ನೊ ಸಂಬೋಧಿಸಿ, ಸ್ವರಾಜ್ಯ ಪಿಪಾಸೆಯುಳ್ಳ ನಮಗೆ ಹಾಲಿನ ಬಾಸೆಯಪ್ಪಂತೆ ಕರುಣಿಸೆಂದು ಕೇಳಿಕೊಂಡಿದ್ದಾರೆ. ಇಂತಹ ಸ್ವರಾಜ್ಯಾಮೃತವನ್ನು ವಿಧಾತನೊಡನೆ ಕೇಳಿಕೊಳ್ಳುವ ನಮ್ಮಲ್ಲಿ ಭಾರತೀಯರಲ್ಲಿ, ವಿಧಾತನಿಗರ್ಪಿಸಲು ಏನಿದೆ?

"ಬಡತನವೆ ಧನವೆಮಗೆ
ಕೊಡಲಾಪೆವೇಂ ನಿನಗೆ?
ಕಂಬನಿಗಳಂದುಗೆ
ಚಾಚುವೆವು ನಿನ್ನಡಿಗೆ"

ಪಾರತಂತ್ರ್ಯದ ನಿಗಡ ಬಂಧನದಲ್ಲಿ ನರಳುತ್ತಿದ್ದ ಭಾರತೀಯರು ಇದಕ್ಕಿಂತ ಹೆಚ್ಚನ್ನು ಏನನ್ನು ತಾನೇ ಕೊಡಲಾಪರು?

'ರಾಷ್ಟ್ರೀಯ ಶಿಕ್ಷಣದ ಸಪ್ತಾಹದ ಕರೆ' ಅಂತಹುದೇ ಒಂದು ರಾಷ್ಟ್ರೀಯ ಕವನ. ಸ್ವಾತಂತ್ರ್ಯ ಸ್ಫೂರ್ತಿಗೆ ಕಳೆಯೇರಲು, ಮಹಾತ್ಮರ ಕರೆಯಂತೆ, ಅಖಿಲ ಭಾರತವೇ ಅಂದೊಮ್ಮೆ ಒಮ್ಮನದಿಂದ ಪರವಸ್ತು, ಪರವಿದ್ಯೆ, ಪರಸೇವೆಗಳಿಗೆ ತಿಲಾಂಜಲಿಯಿತ್ತು ಎದ್ದು ನಿಂತಿತು!

'ತನ್ನ ತಾಯ್ನುಡಿಯಿಂದ ದುಡಿದ ಬಿಜ್ಜೆಯೆ ಬಿಜ್ಜೆ
ಹೆರರ ನಾಲಗೆಯೆಂಜಲೆನ್ನೆಗಂ ಸವಿಯೊ?'

ಎಂದೀ ಕರೆಯನ್ನು ಕೊಡುವಾಗ, ಕವಿ, "ಬಂಗಾರವಪ್ಪುದು ಭವಿಷ್ಯವಲ ಮೆಂದು" ಭರವಸೆಯಿತ್ತರು. ಆ ಭರವಸೆಯಿಂದು ಸಾರ್ಥಕವಾಗುತ್ತಾ ಇರುವುದನ್ನು ನಾವು ನೋಡುತಿದ್ದೇವೆ.

"ಪಾತರಗಿತ್ತಿಗೆ' ಇನ್ನೊಂದು ಚತುರ್ದಶಪದಿ; ಕವಿಗೆ ಪಾತರ ಗಿತ್ತಿಯು ನೋಟದಿಂದ ಪ್ರಣದಯದಾಟವೊಂದು ನೆನಪಾಗಿ ಎದೆಗೆ ನೋವನ್ನುಂಟು ಮಾಡಿತು:

"ನಸೆದ ನಲವಿನ ನೆನಹಿನಂಜನದಿ ನನ್ನ
ಸೋರೆದೆಯು ಸೇದೆಯುಂಸವರೆ ಬಂದಪೆಯಾ?"

ಎಂದು ಕವಿ ಅದರೊಡನೆ ಪ್ರಶ್ನಿಸುತ್ತಾರೆ. 'ಕೇಳಿಸದ ಕರೆ'ಯೆಂಬು ದೊಂದು ಭಾವಗೀತೆ. ಯಾವುದೋ ಒಂದು ಪ್ರಿಯವಾದ ವಸ್ತು, ತನ್ನ ಹತ್ತಿರವೇ ಇರದ ದೂರ ದೂರ ಇರುವಂತಹುದು, ತನ್ನ ಹತ್ತಿರ ಇರ ಬೇಕೆಂದು ಕವಿ ಆಶಿಸುವವಂತಹುದು, ದೇವರೋ, ತನ್ನ ಹೃದಯ ದೇವತೆಯೋ—ಯಾರನ್ನೊ ಸಂಬೋಧಿಸಿ ಈ ಕರೆ ಇದೆ. ತನ್ನಿದಿರು ಆ ವಸ್ತುವಿಲ್ಲದೆ ಇರುವ ಕಾರಣ ಕವಿಗೆ ಆ ಕರೆ ಇದ್ದರೂ ಕೇಳಿಸುವುದಿಲ್ಲ. ಆ ಭಾವನೆಯನ್ನು ಒಂದು ಚಂದವಾದ ದೃಷ್ಟಾಂತದಿಂದ ಹೀಗೆ ಹೇಳಿದ್ದಾರೆ:

"ಎದುರು ಕನ್ನಡಿಯಿಲ್ಲದೆ
ಕಣ್ಣು ಕಣ್ಣನು ಬಲ್ಲುದೆ?
ಹೆರದೆ ಬಸಿರ ಮಗುವನು ತಾ
ಯರಿಯುಳದರ ಮೊಗವನು"

ಆದ್ದರಿಂದಲೇ, ಕವಿ ಇಲ್ಲಿ ತನ್ನ ಬದುಕುಗಾಳಿಪಟದ ಎಳೆ ಕಡಿಯಲು, ಅದು "ಕತ್ತಲೆಯ ಕಾಡಿಗೊ? ನೀನಿರುವ ನೇಸರ ನಾಡಿಗೋ?" ಹೋಗುವುದೆಂದು ಹೇಳುತ್ತಾರೆ.

"ಯೇಸು-ಕೃಷ್ಣ" ಕವಿತೆಯಲ್ಲಿ ಲೋಕದ ಇಬ್ಬರು ಮಹಾಪುರುಷರ ಜೀವನವನ್ನು ಒಂದೇ ದಾರದಲ್ಲಿ ಪೋಣಿಸಿ ಮತ ಸಮನ್ವಯ ಸಾರಲಾಗಿದೆ. ಯೇಸು–ಕೃಷ್ಣರ ಜನನ, ಬಾಲಲೀಲೆ, ಮುಂದಿನ ಜೀವನ, ದೀನಸೇವಾ ಕಾರ್ಯ, ಧರ್ಮಸಂಸ್ಥಾಪನೆ ಮೊದಲಾದ ಸಕಲ ಪ್ರವೃತ್ತಿಗಳೂ ಏಕ ರೀತಿಯಾಗಿವೆಯೆಂದು ಹಿಂದೂ ಕ್ರಿಶ್ಚಿಯನ್ ಪುರಾಣಗಳ ಆಧಾರದಿಂದ ಚಾರಿತ್ರಿಕ ರೀತಿಯಲ್ಲಿಯೂ ಕವಿ ಸಮರ್ಥಿಸಿ, ಕೊನೆಗೆ—

"ಯದುನಾಥನೆ ಯೂದನಾಥನಲ್ಲವೆ?
ಕಾಲಗಳಿವು ನಿನಗಳಿವಿಹುದೆ?
ದಿನವೆರಡರ ಭಾಸ್ಕರನೆರಡಹನೆ?
ನಿನ್ನಲಿ ಭೇದ ಬಗೆಯಬಹುದೆ?

ಹಿಂದೂ ಪುರಾಣ ವ್ಯಕ್ತಿಗಳನ್ನು ಯೇಸುವಿನೊಡನೆ ಹೋಲಿಸಿ, ಯೇಸು ಮೇಲೆಂದೂ, ಹಿಂದೂ ಪುರಾಣ ಪುರುಷರು ಕೀಳೆಂದೂ ಪ್ರಚಾರ ಮಾಡುತ್ತಿದ್ದ ಕೆಲವು ಮತಾಂಧರಾದ ಮಿಶನರಿಗಳ ಆ ಸಂಕುಚಿತ ದೃಷ್ಟಿಯೆಲ್ಲಿ? ಗೋವಿಂದ ಪೈಗಳ ಈ ಸಮನ್ವಯ ದೃಷ್ಟಿಯೆಲ್ಲಿ? ತನ್ನೆದೆಯ ಯದುಕುಲದಲ್ಲಿ ಶ್ರೀ ಕೃಷ್ಣನ ಬಾಲಲೀಲೆಯನ್ನು ಮರಳಿ ಮೆರೆಸದಿರಲು, ಆತನ ಲೀಲೆಗಳನ್ನು "ನಂಬಲೆಂತು" ಎಂದು ಇನ್ನೊಂದು ಕವಿತೆಯಲ್ಲಿ ಕವಿ ತಿಳಿಸಿದ್ದಾರೆ.

೧೯೨೪ರಲ್ಲಿ ಗಾಂಧೀಜಿ ಢಿಲ್ಲಿಯಲ್ಲಿ ಇಪ್ಪತ್ತೊಂದು ದಿನಗಳ ಉಪವಾಸಮಾಡಿದರು; ಆ ಕುರಿತು ಬರೆದ 'ಮಹಾತ್ಮಾರ ಉಪವಾಸ' ಎಂಬ ಪದ್ಯದಲ್ಲಿ, ಪರೀಕ್ಷದ್ರಾಜನಿಗೆ ಶ್ರೀ ಮದ್ಭಾಗವತವನ್ನು ಬೋಧಿಸಿದ ಶುಕ ಮಹರ್ಷಿ, ಉರುವೇಲೆಯ ಅರಳಿ ಮರದಡಿ ಉಪವಾಸವನ್ನಾಚರಿಸಿದ ಬುದ್ಧ, ಯೋರ್ದನ್ ನದಿಯ ಬಳಿ ಉಪವಾಸ ಗೈದಯೇಸು, ಹೀರಾ ಗುಡ್ಡದ ಗುಹೆಯಲ್ಲಿ ಉಪವಾಸ ಗೈದ ಮಹಮ್ಮದ್, ಇಂದು ಈ ಉಪವಾಸವನ್ನಾಚರಿಸಿದ ಗಾಂಧಿ, ಈ ಮಹಾತ್ಮರೆಲ್ಲರೂ ಲೋಕ ಹಿತಕ್ಕಾಗಿ

ಉಪವಾಸ ಮಾಡಿದರೆಂಬ ಸಮಾನತೆಯೊಡನೆ, ಒಂದೇ ಶಕ್ತಿ, ಯುಗ ಯುಗಗಳಲ್ಲಿ ಇಂತು ಜಗತ್ತನ್ನೆಚ್ಚರಿಸುತ್ತಿದೆಯೆಂದು ತಿಳಿಸಿದ್ದಾರೆ:

"ಗುರುವೆ ಇಪ್ಪತ್ತೊಂದು ದಿನದುಪೋಷ್ಯವನೋಂತು
ಥಿಲ್ಲಿಯಿಂ ಚೆಲ್ಲದೀ ಪ್ರೇಮಬೀಜಂ
ಭಾರತದ ಭಾಗ್ಯಲತೆಯಾಗಿ ಮಡಲಿಡದೆಂತು?
ಬೆಳೆಸದೆಂತಮರ ಸೌಂದರ್ಯಮಿದು ಸಾಜಂ?"

ಎನ್ನುವೀ ಭವಿಷ್ಯಸತ್ಯವನ್ನು ಸಾರಿರುವರು.

ತುಳುನಾಡ ದೇವಿಯ ಕುರಿತು 'ತೌಳವ ಮಾತೆ' ಎಂಬ ಸ್ಫೂರ್ತಿಮಯ ಕವನವಿದೆ; ಕವಿ, ವಿಶ್ವ, ಭಾರತ, ಕರ್ಣಾಟಕಗಳ ಪ್ರೇಮಿಯಾದರೂ 'ತಂದೆ ತಾಯಂದಿರ ತಾಯಿ'ಯಾದ ತನ್ನ ಹುಟ್ಟುನಾಡು ತೌಳವ ಮಾತೆಯ ಕುರಿತು ಅತ್ಯಂತವಾದ ಅಭಿಮಾನವನ್ನು ಇಟ್ಟುಕೊಂಡಿದ್ದಾರೆ. ಆದ ಕಾರಣವೇ ತೌಳವ ಮಾತೆಯೊಡನೆ ಅವರ ಪ್ರಾರ್ಥನೆಯಿದು:

"ಧನ್ಯನೆನಿಕೊನಾ ನಿನ್ನಯ ಬಸುರಿಂದುಸುರಿಸಲೀಹೂವನ್ನ!
ಕೆಸರೊಳುದುರಲೀಯದೆ, ನಿನ್ನಡಿಗರ್ಪಿಸಿಕೊಳು ಸೌಸವವನ್ನ!
ಬೇಡುವೆನವ್ವಾ, ಬೀಳ್ಕೊಡುವಂದೆನ್ನನೆತ್ತಿದಂಕದಿ ನಿನ್ನ,
'ಮರಳಿ ಬಾರಕಂದಾ, ನನ್ನುದರದಿ' ಎಂದು ತಬ್ಬಿ ಹರಸೆನ್ನ!"

ತನಗೆ ಉಪ್ಪನ್ನವಿತ್ತು ಸಲಹಿದ ತಾಯ್ನೆಲದ ಕುರಿತು ಈ ಭಾವನೆ ದಿವ್ಯವಾಗಿದೆ!

'ಚಾತಕ' ಒಂದು ಚತುರ್ದಶಪದಿ ಚಾತಕ ಪಕ್ಷಿಯನ್ನು ಕವಿ ಅರಸಿ:

"ನಿನ್ನ ತನುವೆಂತು? ದನಿಯೆಂತು? ಮನೆಯೆಂತು?
ದೆಸೆದೆಸೆಯು ಸೋಸಿನಾಸೋತೆ? ನೀಂ ಭುವಿಯಾ
ಹಾರು ಹಕ್ಕಿಯೊ? ಬರಿಯು ಕಾಣಿಕೆಯೊಕವಿಯಾ?—"

ಎಂದು ಕೇಳಿದರೆ, ಚಾತಕ ಪಕ್ಷಿ ಇಂತು ಹೇಳಿತು:

"ಹೊರಗೆನ್ನನರಸುವರೆ ಮರುಳೆ! ನಿನ್ನೊಳಗೆ
ಮರೆಯುನ್ನ! ಹೊರ ಹಕ್ಕಿಯಲ್ಲ, ನಾನರಿಯಾ?
ನಿನ್ನೆದೆಯ ಮುಸುಕಿಮನನಂಮುಸೆದುಮೊಳಗೆ,

ಕನಸುಝುಲ್ಲೆನೆ ಝುಳಕೆ ಸೋರ್ವಸೀವರಿಯಾ
ಕುಡಿದು ಕಿಲಕಿಲ ಕೆಲೆವೆ ಕಂಠದಿಂ ಕವಿಯಾ"—

ತನ್ನ ಜೀವನದ ಸಂಗಾತಿಯನ್ನು ಕುರಿತು 'ಅಯ್ದುಯ್ದರನಿತಯ್ದುತಯ್ತಾಕಾಲಂ' ಎಂಬುದೊಂದು ಚತುರ್ದಶಪದಿ ಬರೆದಿರುವರು. 'ನಿನ್ನ ನಿನ್ನವರಂದು ನನಗಿತ್ತ ದಿನದಿಂ' ಇಷ್ಟು ಕಾಲ ಆಯಿತೆಂದು ಹೇಳಿ,

'ನಿನಗಾದುದಿಲ್ಲನಾ, ನೀನೆ ನನಗಾದೆ—
ನಿನ್ನಕೆಯ್ವಿಡಿದೆ ನೀನಳಲನನುಭವಿಸೆ'

ಎಂಬ ಸಂಕಟವನ್ನು ನೆನೆದುಕೊಂಡು,

'ನಿನ್ನ ಮುಡಿಗಿಡುವೆನೀ ಕಂಬನಿಯುವೊಲ್ಲೆ
ಯೆನ್ನೆದೆಯುವೊಸಲಂ ತಳೆಯಿುದಂನಲ್ಲೆ!'

ಎಂದು ಸಮಾಧಾನ ತಂದುಕೊಳ್ಳುತ್ತಾರೆ. 'ಮರೆತೆ' ಎಂಬುದೂ ಇಂತು ಒಂದು ಚತುರ್ದಶಪದಿ; 'ಆಸೆಯಾಗರಿಗೆದರಿ ಬಯಲಲೆವಂದು ಮರೆತ ನಿನ್ನನ್ನು' ಇನ್ನೆಂದೂ ಕಣ್ದೆರೆದು ಮರೆಸದಂತೆ ನಿರವಿಸಬೇಕೆಂದು ಕವಿ ಅಪೇಕ್ಷಿಸುವುದಾಗಿದೆ.

'ಶ್ರೀ ವಿದ್ಯಾರಣ್ಯರ ಅಡಿದಾವರೆಯಲ್ಲಿ' ಎಂಬ ಕವಿತೆ ಅಕ್ಷರವೃತ್ತಗಳ ವಿವಿಧಛಂದಸ್ಸುಗಳಲ್ಲಿ ಪೋಣಿಸಲ್ಪಟ್ಟಿದ್ದು ಪ್ರೌಢವಾಗಿದೆ. ವಿದ್ಯಾರಣ್ಯರ ವಿದ್ಯಾಬುದ್ಧಿಗಳನ್ನು, ರಾಜ್ಯಸ್ಥಾಪನಾಸಾಮರ್ಥ್ಯವನ್ನು, ಸರ್ವಧರ್ಮಸಮಾನದೃಷ್ಟಿಯನ್ನು ಎಲ್ಲವನ್ನು ಹೊಗಳಿ, ಕೊನೆಗೆ—

"ಪರಮಾಚಾರ್ಯನೆ, ನಿನ್ನ ಪುಣ್ಯತಿಥಿಯೊಳ್ನಾನೊಂದಿದಂ ಬೇ[illegible]ಂ
ಭವದಾವಾಸದ ಬ್ರಹ್ಮಧಾಮದಲಿ ಮುನ್ನೀಂ ಪುಟ್ಟಿದೀ ಭಾ[illegible]
ಮರೆಯಲ್ಬೇಡೆಮಗಾಗಿ ಬೇಡೊಡೆಯುನನ್ನಮ್ಲಾನಭಾಗ್[illegible]ಯುಂ
ಬರಿಸಲ್ನೀನೆರೆವಂದು ನೀಡದವನಿನ್ನಾರ್ಗಂಗಡಾ ನೀಡುಪಂ?"

ಎಂದು ವಿದ್ಯಾರಣ್ಯರೊಡನೆ ದೇಶದ ಏಳಿಗೆಯುನ್ನೊಂದನ್ನು ಕವಿ ಪ್ರಾರ್ಥಿಸಿಕೊಂಡಿದ್ದಾರೆ; ಕಾಂತಿಗುಂದಿದ್ದ ಭಾರತಕ್ಕೆ ವಿದ್ಯಾರಣ್ಯರಂತಹರೊಬ್ಬರು ಕಳೆಗೊಡಬೇಕಾಗಿತ್ತು; ಬಲ ನೀಡಬೇಕಾಗಿತ್ತು; ಅದೇ ಕವಿಯ ಪ್ರಾರ್ಥನೆಯೂ ಆಗಿತ್ತು;

'ಕಡವಿನಲ್ಲಿ' ಒಂದು ಭಾವಗೀತೆ; ನಸುಕಿನಲ್ಲಿ ಕಡವು ದಾಟಿ, ಕಡವಿನ ಕೇರಿಗೆ ಬಂದು, ಸಂತೆಯಲ್ಲಿ ಸುಳಿದು ಬಂದ ಜೀವ.

ಕಾಣಲಿಹುದನು ಕಂಡು—
ಕೊಳ್ಳಲಿಹುದನು ಕೊಂಡು—
ಬಾಳದೊಡವೆಗೆ ಬೆಲೆಯ ತೆತ್ತು—

ಆದ ಮೇಲೆ, ಪುನಃ ಆಚೆ ದಡಕ್ಕೆ ಹೋಗಲು ಆಶಿಸುತ್ತದೆ; ತವಕವನ್ನೂ ಪಡುತ್ತದೆ; ಏಕೆಂದರೆ—

“ಸಂತೆಗೆನ್ನಯ ಬಳಿಕ ಬಂದು
ಸುತ್ತಿ ನನ್ನೊಡನೆನ್ನ ಮುಂದು
ಮನೆಗೆ ಮಗುಳಿದ ಮಡದಿನೊಂದು
ಬೇಸರಳೆನಾನಿಲ್ಲದೆ?”

ಅಂತೂ ಜೀವ ಆಚೆ ದಡವನ್ನು ನೋಡಲು ಆತುರಪಟ್ಟು, ಓಡ ಓಡೆಂದು ಅರಚಿ ಕರೆದದ್ದಾಯಿತು; ಆಚೆ ಮೂದಲಿಪಂತೆ ಮೊರೆದದ್ದಾಯಿತು,—ಮರುಮಾತು ಇನ್ನೂ ಬರಲೇ ಇಲ್ಲ! ಹಾಗಾಗಿ ಕಡವಿನಲ್ಲಿ ಕುಳಿತು ಇಂತು ಕಂಬನಿಯ ಕರೆ ಕೊಡುತ್ತದೆ ಆ ಜೀವ!

“ತೊರೆಯರೆರೆಯಾ! ಏಕೆ ನಿನ್ನ
ಹೊತ್ತಿಗಲ್ಲದೆ ಬಾರೆ ಮುನ್ನ?
ಹೊತ್ತ ಹಿಂಗಿಸಿ ಹಾಯಿಸೆನ್ನ—
ಕಂಬನಿಯ ಕರೆ ಕೇಳದೆ?”

“ಆತ್ಮಾನಂವಿದ್ಧಿ” ಒಂದು ಚತುರ್ದಶಪದಿ. ತನ್ನನ್ನರಿಯದೆ ಇನ್ನೊಬ್ಬನನ್ನು ಅರಿಯಲು ಸಾಧ್ಯವಿಲ್ಲವೆಂದು ಸಕಲ ಶಾಸ್ತ್ರಗಳೂ ಸಾರುತ್ತಿವೆ. ಇಂತಹ ಆತ್ಮಜ್ಞತೆಗೆ ಬ್ರಹ್ಮಚರ್ಯವನ್ನುಳಿದು ಬೇರೆ ದಾರಿಯಿಲ್ಲವೆಂದು ಕವಿ ತಿಳಿಸುತ್ತಾರೆ; ಅದೇ ಭಿಕ್ಷೆಯನ್ನು ಬೇಡುತ್ತಾರೆ.

ಅಗಲಿದ ಜೊತೆ ಜೀವದ ನೆನಪು “ಯುಗಾದಿಯ ನೆನಪು”. ಯುಗಾದಿಯ ದಿನ ಕವಿಗೆ ಹಿಂದಿನ ಯುಗಾದಿಯ ನೆನಪು ಉಂಟಾಯಿತು.

“ಆ ಯುಗಾದಿಯಲಿ ನೀನೆನ್ನ ಕಣ್ಮಣಿಮ
ಈ ಯುಗಾದಿಯಲಿ ನೀನೆಲ್ಲಿ? ನಾನೆಲ್ಲಿ?”

ಎಂದು ಕವಿ ನೆನಪು ಮಾಡುತ್ತಾ,

‘ಹಬ್ಬವಿನ್ನೆನಗೆ ನಿನ್ನೊಡಗೂಡುವಲ್ಲಿ’

ಎಂದು ಹೇಳಿಕೊಳ್ಳುತ್ತಾರೆ. ಜೊತೆಯು ಜೀವ ಅಗಲಿದ ಸನ್ನಿವೇಶಗಳನ್ನು

'ಮದುವಳಿಗೆಲಗ್ನವೇದಿಕೆಯಂತೆ, ಚಿತಿಯು
ಪೊಗುತಗ್ನಿಯಂ'

—ಹೋದ ದೃಶ್ಯವನ್ನು ನೆನೆದು,

"ಕುಂದೇನು ಮನದನ್ನೆ ನೊಂದಡಾನಿಲ್ಲಿ?
ಮಗು ಮುಡಿದ ತೊಟ್ಟಿಲೇನಾದಡೇನಂತೆ?!"

ಎಂದು ತನ್ನ ಮತ್ತು ಅಗಲಿದ ಮನದನ್ನೆಯ ಮಧುರಸಂಬಂಧವನ್ನೂ ಅಗಲಿ ಬರಡಾದ ತನ್ನ ಜೀವನವನ್ನೂ ಚಿತ್ರಿಸಿದ್ದಾರೆ. ಈ ಜೀವನದಾಚೆಯ ದಡದಲ್ಲಿ ಸೇರುವ ಕಾತರ ಕವಿಗೆ ಇದೆ:

ಸೇರುವೆಗೆ ಕೋರಿಸಿ ಚಕೋರಿಸುವೆನೆನ್ನ
ಪ್ರೇಮಪರಿಧಿಯ ಸುಧಾನಿಧಿಯೆ ನಿನ್ನೆನವಂ!"

"ಬಾಲೆ ನಿನ್ನಯ ತಮ್ಮನೆಲ್ಲಿ?" ಎಂಬುದೊಂದು ನೀಳ್ಗವನ. ಅಕ್ಕನೊಡನೆ ನಿನ್ನ ತಮ್ಮನೆಲ್ಲಿದ್ದಾನೆಂಬ ಪ್ರಶ್ನೆಗೆ, ಹಸುಗೂಸಾದ ಅಕ್ಕ, ತಮ್ಮನು ಈ ಲೋಕದಿಂದ ಅಗಲಿಹೋಗಿದ್ದರೂ ಆತನು ಇನ್ನು ಕೂಡಾ ಇದ್ದಾನೆಂದೇ ಗ್ರಹಿಸಿ, ಹಿಂದೆ ಹಗಲಿನಲ್ಲಿ ತನ್ನೊಡನಾಡುತ್ತಿದ್ದಾತನು, ಇಂದು ರಾತ್ರಿಯಲ್ಲಿ ತನ್ನೊಡನೆ ಬಂದು ಆಟವಾಡುವನೆಂದು ಹೇಳುವುದನ್ನು ಕೇಳಿದ ಕವಿ, ಮಗುವಾದ ಅಕ್ಕನನ್ನು ಹೀಗೆ ಕೊಂಡಾಡುತ್ತಾರೆ:

"ಧನ್ಯೆ ಮಗು ನೀನೆನ್ನಬೇಕೆ?
ಅನಿತಣಂ ನನಗಿಲ್ಲವೇಕೆ?
ಒದಗದಕಟಿನಗಿನ್ನುಮಾಕೆ
ಯೇಕೆ ಕನಸಿನ ಕಾಣಿಕೆ?"

ಅನಂತರ ಅಕ್ಕನಿಗೆ ತಮ್ಮನ ಸುಳಿವು ರಾತ್ರಿಯಲ್ಲಿಯೂ ಬರದೆ ಹೋಯ್ತು; ಆದರೂ ನೆನಪು ಮಾಸಲೊಲ್ಲದು; ಕಣ್ಣೀರನ್ನು ಸುರಿಸುವ ತಾಯಿಯೊಡನೆ ಕೇಳಲು ಏಕೋ ಮನಸ್ಸೇ ಬರಲೊಲ್ಲದು; ಗುಡಿಯ ತಾಯಿಯೊಡನೆ ತನ್ನ ಕಯ್ಬಳೆಯನ್ನು ಕಾಣಿಕೆಯಿತ್ತಾವೆನೆಂದೂ ತಮ್ಮನ ಕೂಟವೀಯಬೇ

ಕೆಂದೂ ಕೇಳಿಕೊಂಡಳು; ಆದರೆ ಆ ಕೇಳಿಕೆಯೂ ವ್ಯರ್ಥ; ನಾಳೆ ತಮ್ಮನು ಬರುವನೆಂದು ಮೊದಮೊದಲು ಆಸೆಯಿತ್ತು; ಅದೂ ವ್ಯರ್ಥವೇ ಆಯಿತು.

'ನಾಳೆಗಳ ಕದ ಹೊಂಚಿತಿರಿಯೆ
ನೋಡುವಾಸೆಯ ಕುಕ್ಕಿ ಬರಿಯೆ—
ನಾಳೆಯಿದೆ, ನೀನಿಲ್ಲವೇಂ?'

ಇಂತು ತಮ್ಮನಿಲ್ಲದ ಮುಗ್ಧಬಾಲೆಯಾದ ಅಕ್ಕನ ವ್ಯಾಕುಲ ಇದರಲ್ಲಿ ವರ್ಣಿತವಾಗಿರುವುದು.

ಮರಣದ ಮೇಲೆ ಏನು? ಎಂಬ ಪ್ರಶ್ನೆ "ಕ್ವ?" ಎಂಬ ಕವನದ ಸ್ಫಿದೆ: ಅಲ್ಲಿರುವವರು ಇಲ್ಲಿನವರನ್ನು ನೆನೆಯುತ್ತಾರೆಯೋ? ಆಂದು ಅಗಲಿದವರು ಮುಂದೆ ಒಂದಾಗುವರೆ? ಈ ಪ್ರಶ್ನೆ ಕವಿಗೆ ಆಗಾಗ ಒಡಮೂಡುತ್ತದೆ.

"ಪಯಣಗತಿ ಎಂತಾಚೆ? ಯಾವ ಮೇರೆವರಂ?
ಅಲ್ಲಿ ನೆಲೆವರೆ? ಮರಳ್ಚುವರೆ ಇಲ್ಲಿಗವರಂ?
ನೆನೆವರೇಂ ಮರೆವರೇನಲ್ಲಿ ಇಲ್ಲಿದರಂ?"

ಅಗಲಿಹೋದ ಜೀವಗಳನ್ನು ಕವಿ ಅಲ್ಲಲ್ಲಿ ಆಗಾಗ ನೆನಪು ಮಾಡಿಕೊಳ್ಳುತ್ತಾರೆ! ಆದರೆ ಅಗಲಿದವರ ಸ್ಥಿತಿಯೇನು? ಅವರ ನೆನವರಿಕೆ ಎಂತಹುದು ಎಂಬೀ ವಿಚಾರಗಳು ಕವಿಗೆ ಸಮಸ್ಯೆಯಾಗಿವೆ!

ಥಿಯೋದೋರ್ ಕೋರ್ನರ್ ಎಂಬ ಜರ್ಮನ್ ಕವಿಯ 'ಪ್ರೇಯರ್ ಡ್ಯುರಿಂಗ್ ದಿ ಬೇಟ್ಲ್' ಎಂಬ ಅನುವಾದಿತ ಆಂಗ್ಲ ಕವಿತೆಯಿಂದ ಪ್ರೇರಿತವಾದ ಪದ್ಯ 'ಕೊಳುಗುಳದ ಮನವಿ' ಎಂಬುದು; ಇದು ಸ್ಫೂರ್ತಿಮಯವಾದ ವೀರಭಾವನೆಯ ಕವಿತೆ. ಭಾರತದ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಪಡುಗಡಲತಡಿಯಿಂದ ಮೊಳಗಿದ ಕನ್ನಡದ ರಣಭೇರಿ!

ಯುದ್ಧರಂಗಕ್ಕೆ ಹೊರಟ ಯೋಧನೊಬ್ಬನು ದೇಶದ ಹೋರಾಟದಲ್ಲಿ 'ಮಾಡಿ ಮಡಿಯಲು' ತನಗೆ ಸಕಲ ಬೆಂಬಲವನ್ನು, ಪೂರ್ಣ ಶಕ್ತಿಯನ್ನು ನೀಡೆಂದು ದೇವರೊಡನೆ ಮಾಡಿಕೊಳ್ಳುವ ಪ್ರಾರ್ಥನೆಯಿದು. ಹೋರಾಟ ತೊಡಗಿದೆ; ಮೇಘಗರ್ಜನೆಯಂತೆ ಸಿಡಿಗುಂಡು ಮೊಳಗುತ್ತಿದೆ; ಸಮರ ತೂರ್ಯ ಊದುತ್ತಿದೆ; ತಾನು ಜೀವಂತಕೋವಿಯಾಗಿ ಯೋಧನು ಮುನ್ನುಗ್ಗಿದ್ದಾನೆ; ದೇವರೊಡನೆ ರಣದೀಕ್ಷೆಯನ್ನು ಬೇಡುತ್ತಾನೆ; ಇಂತಹ

ಹೋರಾಟವಾದರೂ ಅಸ್ವೈರ ರಾಜ್ಯಾಕ್ರಾಂತಿಗಾಗಿಯಲ್ಲ, ತಾಯ್ನಾಡಿನ ಸೆರೆಯನ್ನು ಬಿಡಿಸಲಿಕ್ಕಾಗಿ; ಇಂತಹ ಧರ್ಮಯುದ್ಧಕ್ಕೆ ಆತನು ಸಿದ್ಧನಾಗಿರುವನು. ದೇವರ ನೆರವು ಆತನಿಗೆ ಬೇಕಾಗಿದೆ.

ತನ್ನ ದೇಹದಲ್ಲಿ ಪ್ರಾಣವಿರುವ ತನಕ, ತನ್ನ ಕೈಯ್ಯಲ್ಲಿ ಕೃಪಾಣವಿರುವ ತನಕ ಆತನು ಹೋರಾಡಲು ಸಿದ್ಧನೇ! ಕಾದುವುದೊಂದೇ ಆತನ ಕಾರ್ಯ. ಈ ಕಾರ್ಯದಲ್ಲಿ ಸತ್ತರೂ ಬದುಕಿದರೂ ಒಂದೇ; ದೇವರ ಹೆಸರೆತ್ತಿ ಕತ್ತಿಯೆತ್ತಿದ್ದಾನೆ; ದೇವರು ಆತನನ್ನು ಜಯಕ್ಕೆ ಮುನ್ನಡೆಯಿಸಲಿ, ಅಥವಾ ಮರಣಕ್ಕೆ ಮುನ್ನಡೆಯಿಸಲಿ, ಎಲ್ಲವೂ ಒಂದೇ; ತಾನು ಸತ್ತರೂ ದೇವರು ತನ್ನ ತಾಯ್ನಾಡನ್ನು ಬಿಡುಗಡೆಗೊಳಿಸುತ್ತಾನೆಂಬ ಭರವಸೆ ಆತನಿಗೆ! ಹಾಗಾಗಿ ಯೋಧನ ಅಪೇಕ್ಷೆ ಇದು:

"ಮುನ್ನಡೆಯಿಸೆನ್ನನೊಡೆಯಾ!
ಇಂದು ಜೀವಮುನೆನ್ನ ತೆತ್ತೆಕೆಯ್ಗಿದೊ ನಿನ್ನ—
ನೀನಿದಂ ನನಗಿತ್ತೆ ನೀನೆಕೊಳಬಲ್ಲೆ!
ಹರಸೆನ್ನನುಳಿಯೆಂದೊ, ಹರಸೆನ್ನನಳಿಯೆಂದೊ—
ಆಳುವ ತಾಯಿಳೆಯೊಳೆನ್ನಳಿವುಳಿವನೊಲ್ಲೆ!
ಇದೆ ಜಲಾಂಜಲಿ ಜೀವಿತಾಶೆಗೊಡೆಯಾ!
ನಿನಗೆನ್ನನಿತ್ತೆನೊಡೆಯಾ!"

ಇಂತಹ ಹೋರಾಟದಲ್ಲಿ ತಾಯಿನಾಡಿಗೆ ಸ್ವಾತಂತ್ರ್ಯವನ್ನು ತರದೆ ಸತ್ತೆನಾದರೆ ತನಗೆ ಸ್ವರ್ಗ ಸುಖವೂ ಬೇಡ, ಇದೇ ನಾಡಿನಲ್ಲಿ ಪುನಃ ಹುಟ್ಟಿ ದೇಶಕ್ಕಾಗಿ ಹೋರಾಡುತ್ತೇನೆ!

ಎಂತಹ ವೀರವಾಣಿ; ಎಂತಹ ಸ್ವಾತಂತ್ರ್ಯಪ್ರೇಮ; ಎಂತಹ ದಿವ್ಯ ಪ್ರಾರ್ಥನೆ!

"ಪಂಡರಪುರದಲ್ಲಿ" ಎಂಬುದು ವಿಠೋಬನನ್ನು ಕುರಿತು ಹಾಡಿದ ಭಕ್ತಿಗೀತೆ. ಯಾವ ಭಾಗ್ಯದಿಂದಲೋ ಕವಿ ಪಂಡರಪುರಕ್ಕೆ ಬಂದರು; ಪಂಡರಿನಾಥನನ್ನು ಕಂಡು ಧನ್ಯರಾದರು. ತುಕಾರಾಮ, ನಾಮದೇವಾದಿ ಭಕ್ತವರೇಣ್ಯರು ಎಲ್ಲಿ ದಿವ್ಯದರ್ಶನವನ್ನು ಕಂಡರೋ, ಆ ನೆಲೆ ನಿಜವಾಗಿಯೂ ವಿಶೇಷದ್ದೇ ಆಗಿರುವುದು.

"ಗೆಯ್ದ ಪಾಪಮನಿತುಂ ನಿನಗರ್ಪಣ
ಗೆಯ್ಯದ ಪುಣ್ಯಮದುಂ ನಿನಗರ್ಪಣ
ಕಳೆದುಳಿದ ಜೀವಿತಂ ನಿನಗರ್ಪಣ"

ಹೀಗೆ ಎಲ್ಲವನ್ನೂ ಬ್ರಹ್ಮಾರ್ಪಣ ಮಾಡಿ ಹಾಡಿದ್ದಾರೆ.

"ಪಾಲು ಮಾರಿಕೆ"ಯೂ ಒಂದು ನೀಳ್ಗವನ. ಯಾವಳೋ ಒಬ್ಬಳು ಹಾಲು ಮಾರುವವಳು, ಹೊಳೆಯಾಚೆಗೆ ಹಾಲುಕೊಂಡುಹೋಗುವವಳು, ದಡಕ್ಕೆ ಬಂದು ನಿಂತಳು; ದೋಣಿ ಬರಲು ತಡವಿದ್ದುದರಿಂದ ಹಾಲಿಗೆ ಸ್ವಲ್ಪ ನೀರು ಬೆರಸಿ ಕೊಡತುಂಬಿಸಿಕೊಂಡಳು. ಆಗ ದೋಣಿ ಬಂತು; ಅದರಲ್ಲಿ ಕುಳಿತು ಸಾಗಿದಳು; ಸಾಗುವಾಗ ಮುಖದಲ್ಲಿ ಗೆಲವಿತ್ತು! ಒಮ್ಮೆಲೇ ಅವಳ ಕಿವಿಯ ವಾಲೆ ನೀರಿಗೆ ಬಿದ್ದು ಬಿಟ್ಟಿತು; ಆಕೆಗೆ ಅತ್ಯಂತ ದುಃಖವಾಯಿತು! ಬಳಿಯಿದ್ದ ಒಬ್ಬ ರಸಿಕ ಅಂದನು: ಸುಮ್ಮಗೆ ನೀನೇಕೆ ಚಿಂತಿಸುತ್ತಿ? ನೀನು ಹಿಂದೆ ದುಡಿದಂತೆಯೆ, ಇನ್ನೂ ದುಡಿಯಬಲ್ಲೆ; ನಿನಗೇನು ಹರೆಯವಿಲ್ಲವೆ? ಊರಿನಲ್ಲಿ ನೀರಿನ ಒರತೆ ಬೇಕಷ್ಟಿದೆ, ನಿನಗೆ ಚಿನ್ನಕ್ಕೂ ಕೊರತೆಯಾಗದು; ನೀನು ಹಾಲಿಗೆ ನೀರು ಬೆರೆಸಿ ತಂದಿರುವಿಯಷ್ಟೆ? ಆದ್ದರಿಂದ—

"ನೀರಿಗಾಯ್ತು ನೀರಪಾಲು,
ಉಳಿದುದಿನ್ನು ಹಾಲ ಪಾಲು,
ಗೆಯ್ದುಗೆಯ್ಮೆ ತನ್ನ ಪಾಲು
ಕೊಳ್ಳದಿರುವುದೆ?"

—ಈ ಕತೆಯಲ್ಲಿ, ಕತೆಯೊಳಗಿನ ತಿರುಳಲ್ಲಿ, ತಿರುಳನ್ನು ತಿಳಿವ ರಸಿಕತೆಯಲ್ಲಿ ಎಂತಹ ಸ್ವಾರಸ್ಯವಿದೆಯೆಂಬುದನ್ನು ರಸಿಕರಾದವರು ಅರಿಯಬಲ್ಲರು.

"ಕನ್ನಡಿಗರ ತಾಯಿ" ಎಂಬ ಪದ್ಯ ಕನ್ನಡ ನಾಡಿನಲ್ಲೆಲ್ಲಾ ಅತ್ಯಂತ ಪ್ರಸಿದ್ಧವಾದ ಇಂದಿನ ನಾಡಹಾಡುಗಳಲ್ಲೊಂದು. ಈ ಕವನದ ಶಬ್ದ, ಅರ್ಥ, ತಾಳ, ನಾದ, ಛಂದೋಗತಿಗಳು ಪ್ರತಿಯೊಂದು ಸುಂದರವಾಗಿವೆ.

'ತನು ಕನ್ನಡ, ಮನು ಕನ್ನಡ, ನುಡಿ ಕನ್ನಡವೆಮ್ಮವು'

ಎಂದು ಕವಿ ಪ್ರಾರಂಭಿಸಿ, ಈ ನಾಡಿನಲ್ಲಿ, ಹಣ್ಣುಕಾಯಿಗಳನೀವ ಮರಗಳಿಗೆ, ಪತ್ರ ಪುಷ್ಪಗಳನ್ನೀವ ಲತೆಗಳಿಗೆ,

ತೆನೆಯು ಕೆನೆಯು ಗಾಳಿಗೆ—
ಖಗಮೃಗೋರಗಾಳಿಗೆ—
ನದಿ ನಗರನಗಾಳಿಗೆ—

ಯಾವುದಕ್ಕೂ ಕೊರತೆ ಇಲ್ಲವೆಂದು ಹೇಳಿ 'ಜೇನು ಸುರಿವ ಹಾಲು ಹರಿವ ದಿವಂಭೂಮಿಗಿಳಿದುದೆ?' ಎಂದು ಕನ್ನಡ ನಾಡಿನ ಸವಿಸೊಬಗನ್ನು ತಿಳಿಸಿದ್ದಾರೆ.

ರಾಮಾಯಣ ಭಾರತಗಳ ಕಾಲದಿಂದಲೂ ಈ ನಾಡುಪ್ರಸಿದ್ಧವಾಗಿತ್ತೆಂದೂ, ಶಕ ಪುರುಷನಾದ ಶಾಲಿವಾಹನನಿಂದ, ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ, ಕಳಚೂರ್ಯ, ವಿಜಯನಗರ ಮೊದಲಾದ ಅರಸರಿಂದ ಆಳಲ್ಪಟ್ಟಿತೆಂದೂ, ಇಲ್ಲಿ ಜೈನ, ಮಾಧ್ವ, ವೀರಶೈವ ಮತಾಚಾರ್ಯರು ಹುಟ್ಟಿದರೆಂದೂ, ಪಂಪ ರನ್ನ ಲಕ್ಷ್ಮೀಶ ಷಡಕ್ಷರಿ ಮುದ್ದಣ್ಣ ಮೊದಲಾದ ಕವಿವರ್ಯರು ಜನ್ಮ ತಾಳಿದರೆಂದೂ, ತಿಳಿಸಿ, ಇಲ್ಲಿನ ಶಿಲ್ಪ ವೈವಭವನ್ನು ವರ್ಣಿಸಿ, ಕನ್ನಡ ನುಡಿ ಅತ್ಯಂತ ಪುರಾತನವೆಂದು ಹೇಳಿದ ನಂತರ ಕನ್ನಡಿಗರ ಇಂದಿನ ದುರವಸ್ಥೆಯನ್ನು ಹೀಗೆ ತಿಳಿಸಿದ್ದಾರೆ:

"ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ
ಮೃಗದ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ!
ಕನ್ನಡ ಕಸ್ತೂರಿಯನ್ನ
ಹೊಸತುಸಿರಿಂತೀಡದನ್ನ
ಸುರಭಿ ಎಲ್ಲಿ? ನೀನದನ್ನ
ನವ ಶಕ್ತಿಯಿನೆಬ್ಬಿಸು—
ಹೊಸ ಸುಗಂಧದೊಸಗೆಯಿಂದ ಜಗದಿ ಹೆಸರ ಹಬ್ಬಿಸು!

ಈ ಹಾಡಿನ ಲಲಿತಪದಗತಿಗೆ ಯಾವ ಕನ್ನಡಿಗನಮನವು ತಾನೇ ನಲಿಯದು?

"ಬೇಕು—ಬೇಡ" ಮತ್ತೊಂದು ದೀರ್ಘ ಕವನ.

ಬೇಕೆಂಬುವ ಬಡತನವ
ನ್ನೇಕೆ ಕರೆದುಕೊಳುವೆ?

ಬೇಡದೆ ಬಹಬಲುಧನವ
ನ್ನೇಕಕಟಾ ಕಳೆವೆ?"

ಮೇಲಿನ ಮಾತಿನಲ್ಲಿ ಸರಿಯಾದ ತರ್ಕವೇ ಇದೆ; 'ಬೇಕು' ಎಂದು ಹೇಳುವುದರ ಹಿನ್ನೆಲೆಯೇ ತನ್ನಲ್ಲಿ ಇಲ್ಲವೆನ್ನುವ ಬಡತನವಿಲ್ಲವೆ? ಹಾಗಾಗಿ ಅಂತಹ ಮನೋದಾರಿದ್ರ್ಯ ನಿನಗೇಕೆ? 'ಬೇಡ' ಎನ್ನುವುದರ ಹಿನ್ನಲೆಯೂ ಅದೇ ರೀತಿ; ತನ್ನಲ್ಲಿ ಬೇಕಾದದ್ದು ಉಂಟು ಎನ್ನುವುದು ತಾನೆ? ಆದ್ದರಿಂದ ಅದೇ ಸಂಪತ್ತಲ್ಲವೆ? ಆದ್ದರಿಂದ ಈ ಬೇಕು—ಬೇಡ ಭ್ರಮೆ ಯಾಕೆಂದು ಕವಿ ಕೇಳುತ್ತಾರೆ. ಅದಿಲ್ಲದೆಯೇ ಮನುಷ್ಯ ಸುಖವಾಗಿಲ್ಲವೆ?

"ಬೇಡಿದೆಯೇಂಕುಡಿವ ಜಲವ
ಜೀವನಾನಿಲವಂ?
ತ್ರಿದಶಾಧಿಕ ಮನೋಬಲವ
ನಪನಿಯನಿಲಯುಮಂ?
ನವನವೀನ ಭಾವನವಂ?
ನಿರವಶೇಷ ಜೀವನವಂ?
ತನುವನನೂನವಂ?"

ಇದೆಲ್ಲವನ್ನೂ ಬೇಡದೆ ಪಡೆದಿರಲು ಮತ್ತೆ ಬರಿಯ ಹಂಬಲವಾದರೂ ಏತಕ್ಕೆ? ಸುಖಗಾಮಿಗಳಿಗೆ, ಕೀರ್ತಿಕಾಮಿಗಳಿಗೆ, ಧನಸ್ವಾಮಿಗಳಿಗೆ, ಇಡೀ ಮಾನವ ಲೋಕಕ್ಕೆ ಇದೊಂದು ಒಳ್ಳೆಯ ನೀತಿಯಾಗಿದೆ.

'ಹೆಂಗಸು' ಎಂಬುದು ಒಂದು ಚತುರ್ದಶಪದಿ. ಚೈತನ್ಯ ದೇವನ ಪ್ರಖ್ಯಾತ ಶಿಷ್ಯನಾದ ರೂಪ ಗೋಸಾಯಿ, ನಾರಿಯೆಂಬ ಕಾರಣದಿಂದ ಮೀರಾ ಬಾಯಿಗೆ ದರ್ಶನವನ್ನು ಕೊಡಲೊಪ್ಪಲಿಲ್ಲ.

"ಹೆಮ್ಮೊಗವ ನೋಡದೇನವನ ವೈರಾಗ್ಯಂ?
ಏತರೀವ್ರತವೊ?"—

ಎಂದು ಮೀರಾಬಾಯಿ ಪ್ರಶ್ನಿಸುವಳು. ಹೆಂಗಸು ಗಂಡಸರಲ್ಲಿ ಅಭೇದ ತಿಳಿಯದ ಈ ಗೋಸಾಯಿಗೆ ದೇವರ ದರ್ಶನವಾದರೂ ಎಂತಾದೀತೆಂದು ಆಕೆ ಕೇಳುತ್ತಾಳೆ:

'ರಾಧೆಯಾರೆಂಬುದಂ ಗೋಸಾಯಿ ಮರೆವಂ—
ರಾಧೆಯುಹಮುನ್ನ ಮೇಂಗಿರಿಧಾರಿ ದೊರೆವಂ ?"

ಗಿರಿಧಾರಿಯನ್ನು ರಾಧೆ ಪ್ರೀಯಾಗಿ ಒಲಿಸಿಕೊಂಡಳು! ಅಂತಹ ತನ್ಮಯತೆ, ಅಭೇದಭಾವನೆ ಬರದೆ ಈ ಗೋಸಾಯಿಗೆ ಗಿರಿಧಾರಿ ಎಂತು ದೊರೆವನೆಂಬ ಪ್ರಶ್ನೆ ಸಮಂಜಸವೇ ಆಗಿದೆ.

"ಸಫಲ" ಒಂದು ಭಾವಗೀತೆ. ಹೊಂಚುವ ಮಿಂಚುಹುಳಗಳನ್ನು 'ನಮ್ಮ ಸೊಡರನುರಿಸುವಿರೇ' ಎಂದು ನಕ್ಷತ್ರ ಜಂಕಿಸಿತು! ತೆರೆಯು ದಳವು, ಪಲ್ಲವಿಸುವ ಝಿಲ್ಲಿಗಳನ್ನು 'ಹಾಡುವಿರೇನೆಮ್ಮ ಹಾಡ' ಎಂದು ಜರೆದಿತು! ಒಂದು ಆಟಿಯ ನಟ್ಟಿರುಳಲ್ಲಿ, ಬೀಸುವ ಮಳೆಯಲ್ಲಿ, ಬೆಟ್ಟ ತೂಕಡಿಸುತ್ತಿರಲು, ಆಕಳಿಸುವ ತೊಟ್ಟಿಯಲ್ಲಿ, ಮೇಕೆದಾರಿಯಲ್ಲಿ ಒಬ್ಬ ಪಥಿಕನು, ಕಂಗಾಲಾಗಿ ನಡೆದುಹೋಗಲು, ಒಂದೇ ಒಂದು ತಾರೆ ಬೆಳಗಲಿಲ್ಲ; ಒಂದೇ ಒಂದು ತರಂಗ ಭೋರ್ಗರೆಯಲಿಲ್ಲ! ಆದರೆ ಆಗ—

"ಮಿಂಚು ಹುಳವ ಕಂಡನೆಂತು,
ಝಿಲ್ಲಿಯ ಗಾನವಂ
ಕೇಳ್ದನೆಂತು, ಮೂಡಿತೆಂತು
ಕಂತಿದೆಳವೆನವಂ—
ಕಂಗೆ ಸುಳಿಯುಲೆಳೆಯ ಸೊಂಪು,
ಕಿವಿಗೆ ನುಸಳೆ ಹಸುಳೆಯಿಂಪು,
ಪಥವ ಹಿಡಿದನವಂ"

ಆದ್ದರಿಂದಲೇ ಕವಿ ಹೇಳುತ್ತಾರೆ:

"ಹಿರಿದು ಕಿರಿದು ಹಾಡಿಗಿಲ್ಲ
ಪರರ ಹಾಡು ತನಗೆ ಸಲ್ಲ
ಹಾಡು ಸಫಲವೆಲ್ಲ"

ಜಗತ್ತಿನಲ್ಲಿ ನಕ್ಷತ್ರದ ಬೆಳಕೇ ಬೆಳಕಲ್ಲ; ತರಂಗದ ಭೋರ್ಗರೆತವೇ ದನಿಯಲ್ಲ, ಮಿಂಚು ಹುಳದ ಬೆಳಕೂ ಬೆಳಕೇ; ಝಿಲ್ಲಿಯ ಹಾಡೂ ಹಾಡೇ! ದೊಡ್ಡವರಿಗೇ ಸ್ಥಾನವಲ್ಲ; ಬಡವರಿಗೂ ಅವರ ಸ್ಥಾನ ಅವರಿಗೆ ಇದ್ದೇ ಇದೆ; ಅದು ಸಫಲವೂ ಆಗಿದೆ! ಕವಿಯ ಸರ್ವಸಮತಾದೃಷ್ಟಿಯನ್ನಿಲ್ಲಿ ನಾವು ಕಾಣಬಹುದಾಗಿದೆ.

"ಮಹಾಕವಿ ಕುಮಾರ ವ್ಯಾಸನಿಗೆ" ಅವನದೇ ಛಂದಸ್ಸಿನಲ್ಲಿ, ಭಾಮಿನೀಷಟ್ಪದಿಯ ಇಪ್ಪತ್ತೊಂದು ಸುಂದರ ಪದ್ಯಗಳಲ್ಲಿ ಕವಿ ತನ್ನ ಭಕ್ತಿಕುಸುಮಾಂಜಲಿಯನ್ನು ಅರ್ಪಿಸಿದ್ದಾರೆ.

"ಯಾವ ರಾಯನ ನಾಡೊಳಿರ್ದೆಯೊ,
ಯಾವ ಕಾಲದಿ ಬಾಳಿದೆಯೊ, ಮ
ತ್ತಾವ ಕಾವ್ಯವರಚಿಸಿದೆಯೊ ನೀನೊಬ್ಬನದನರಿವೆ;
ಏವರಂ ಭಾರತದ ಕೇಳಿಕೆ
ಯೇವರಂ ಕನ್ನಡದ ಬಾಳಿಕೆ
ಯಾವರಂ ನೀಂ ಬಾಳ್ದಿಯೆಂದಿದನೊಬ್ಬ ನೀನರಿಯೆ"

ಇಂತು ಕುಮಾರವ್ಯಾಸನ ಮಹಿಮೆಯನ್ನು ಶ್ರೀ। ಪೈಗಳು ಕೊಂಡಾಡಿರುವರು.

"ಸುಮ್ಮನೇಕೆನ್ನ ನೆಲೆ ವಿಧಿಯೆ ಕಾಡಿಸುವೆ" ಎಂಬುದೊಂದು ಚತುರ್ದಶಪದಿ. 'ಬೇಡಿದುದನ್ನು ಕೊಡದ, ಬೇಡದುದನ್ನಾಯ್ದು ಕೊಡುವ' ವಿಧಿ ಸುಮ್ಮನೇ ತನ್ನನ್ನು ಕಾಡಿಸುತ್ತಿದೆಯೆಂದು ಕವಿ ಹೇಳುತ್ತಾರೆ. ಕವಿಗೆ ತನ್ನವಳನ್ನು ತನ್ನಿಂದ ಒಯ್ದ 'ಇಂದು' ಬೇಡ, ಅವಳನ್ನು ಕಾಣಿಸದ 'ನಾಳೆ'ಯಾದರೂ ಯಾತಕ್ಕೆ? ಸಾಧ್ಯವಿದ್ದರೆ, ಅವಳಿದ್ದ ನಿನ್ನೆ ಸಾಕು—ತನಗೆ ಅದನ್ನು ನೀಡೆಂದು ಕವಿ ಕೇಳುತ್ತಾರೆ.

'ಬಲ್ಲುದೆ ಲತೆ ಫಲಂ ತನ್ನ' ಇದೊಂದು ಭಾವ ಗೀತೆ. ಲತೆಗೆ ತನ್ನ ಫಲವು ಸಿಹಿಯೊ, ಕಹಿಯೊ ಎಂಬುದು ಗೊತ್ತಾಗಲಾರದು; ಅದು ಪ್ರಕೃತಿ ಸಹಜವಾಗಿ ಫಲ ಬಿಡುತ್ತದೆ. ಹಣ್ಣು ಸಿಹಿಯಾದರೆ ರಸಜ್ಞರು ಕೊಳ್ಳುವುದು, ಕಹಿಯಾದರೆ ಕಳೆವುದು, ಅಥವಾ ಯಾರೂ ಆ ಫಲವನ್ನು ಸವಿಯದೇ ಇದ್ದರೂ ಲತೆಗೆ ತನ್ನ ಫಲವು ಎಂದೂ ಭಾರವಾಗಲಾರದಷ್ಟೆ? ಯಾರೂ ಆ ಫಲವನ್ನು ಕೊಳ್ಳದೇ ಇದ್ದರೂ, ಅದು ಅದರ ಕೆಳಗೇ ಉದುರಿ ಅದಕ್ಕೆ ಗೊಬ್ಬರವಾಗಿ ಮರುವೆಳಸು ಕೊಬ್ಬದಿದ್ದೀತೆ?—ಇಂದಿನ ಜನರು ಯಾರೂ ಈ ಫಲವನ್ನು ಕೊಳ್ಳಲಿಲ್ಲವೆಂದರೂ, ಮುಂದೆ ಬರುವವರಾದರೂ ಸವಿವರೆಂಬ ನಂಬಿಕೆ ಲತೆಗೆ ಇದ್ದರೆ ತಪ್ಪೇನಿದೆ? ಅದೂ ನಿರರ್ಥಕವಾದರು ಕೂಡಾ—

"ಮುಂಬಿಗರಿದನಂತೆ ನೂಕೆ
ಬಳ್ಳಿ ಬರಿದೆ ಕೊರಗಲೇಕೆ?
ಹೆತ್ತಳೈಸೆ ಫಲಮನಾಕೆ
ಕಡುಸಾಜತೆಗೆ?
ಯಾರೊಲ್ಲಡೆ ಗಾಳಿ ಬೀಸೆ
ತನ್ನು ದುರಿದ ಫಲದ ಸೇಸೆ
ಭೂಮಾತೆಯ ಮುಡಿಗೆ ಸೂಸೆ
ಸಾಲದೆ ಲತೆಗೆ?''

ಇಂಥ ಭರವಸೆ ಲತೆಗೆ ಖಂಡಿತವಾಗಿಯೂ ಸಾಕು. ತಾನುಗೆಯ್ದ ಗೆಯ್ಮೆಯನ್ನು ಜನ ಇಂದಿಗೋ ನಾಳೆಗೋ ಮೆಚ್ಚದೇ ಇರಬಹುದು; ಆದರೆ ಗೆಯ್ದವನಿಗೆ ತಾನು ತನ್ನ ಕರ್ತವ್ಯವನ್ನು ನೆರವೇರಿಸಿದ ಆತ್ಮತೃಪ್ತಿಯೇ ಹೆಚ್ಚಲ್ಲವೆ? ತಾನು ರಚಿಸಿದ ಕಾವ್ಯವನ್ನು ಇಂದಿನವರೋ, ಮುಂದಿನರೋ ಮೆಚ್ಚದಿದ್ದರೂ ಕವಿಗೆ ತನ್ನ ಸ್ವಾಂತ ಸುಖ ಹಿರಿದಲ್ಲವೆ?

"ಜೀವನದೀ ಮಧುಮಾಸಂ" ಒಂದು ಹೃದಯವೀಣೆ. ಜೀವನದಲ್ಲಿ ಮಧುಮಾಸ ಮುಗಿದು ಹೋಯಿತು; ಮನೆಗೆ ಬಂದಿದ್ದ ಅಕ್ಕರೆಯ ಪಿಕ ಹಾರಿಹೋಯಿತು!—ಹೀಗೆ,

"ನಡುಚೈತ್ರದಿಮಸಗೆ ಗ್ರೀಷ್ಮ
ಬೇಯದೆ ಮನಸು?"

ಎಂದು ಕವಿ ಚಿಂತಿಸಿ ಕೊನೆಗೆ ಈ ಸಮಾಧಾನ ತಂದುಕೊಳ್ಳುವರು:

ಒಮ್ಮೆ ಮುಗಿಯಲದೆ ವಸಂತ
ವಿನ್ನಹುದಳವೆ?
ಒಮ್ಮೆ ಮುಗಿದ ತನುವನಂತ
ರಂನಮುಗೊಳವೆ?
ಸುಗ್ಗಿ ಮುಗಿದೆ ಮಳೆಯಲ್ಲವೆ?
ತನು ಮುಗಿದಡೆ ಕೆಳೆಯಿಲ್ಲವೆ?
ಕೆಳೆಗೇನಳಿವೆ?"

ಜೀವನದ ಮಧುಮಾಸ ಬತ್ತಿದರೂ ಜೀವನದ ಮಧುರ ವಿಕಾಸ ಮುತ್ತಿ

ದರೂ, ಕೆಳೆಯೊಂದು ಇದ್ದರೆ ಕವಿಗೆ ಸಾಕು! ಬದುಕಿನ ದೇಗುಲದಲ್ಲಿ ಸ್ನೇಹದ ನಂದಾದೀಪ ಬೆಳಗುತ್ತಾ ಇದ್ದರೆ ಇನ್ನೇನು ಬೇಕು?

'ಬರ್ದಿಲ' ಎಂಬುದು ಕವಿ ಮತ್ತು ಕವಿಕೃತಿಯು ಕುರಿತು ಪ್ರಶಂಸಿಸುವ ಒಂದು ಚತುರ್ದಶಪದಿ; ಹಳೆಯ ಅಕ್ಷರವೃತ್ತದ ಛಂದಸ್ಸಿನಲ್ಲಿ ಬರೆಯಲ್ಪಟ್ಟಿದೆ. ಹಿಂದಿನ ಆ ಹೂಗಳು, ನಲಿವಕ್ಕಿಗಳು, ಕೊಳಂಗಳು, ತಂಗಾನಗಳು, ಧಾರಿಣಿಯ ವೀರರು, ರಾಜಾರಾಣಿಯರು ಯಾರೂ ಇಂದಿಗೆ ಉಳಿದಿಲ್ಲ; ಆದರೆ "ಬಲು ಗಬ್ಬಿಗನೊಬ್ಬನೇ ಬಾಳ್ವ ಬರ್ದಿಲಂ" ಆಗಿ ಉಳಿದಿದ್ದಾನೆ.

"ವಿಗಡರ್ ಕಬ್ಬಿಗರವನಿಂ
ದೊಗೆಯಿಸುವರ್ ಬಗೆಗೆ ಬಂದುದೆಲ್ಲಮನಮವಾ"

ಎಂಬ ಹಿರಿಯ ಕವಿಯ ಉಕ್ತಿಯನ್ನು ನಾವಿಲ್ಲಿ ನೆನವರಿಸಿಕೊಳ್ಳಬಹುದು.

"ಜಯಜಯಾ" ಕವನದಲ್ಲಿ, ಒಡೆಯನೊಡನೆ ಭಾರತದ ಬಿಡುಗಡೆಗೆ ಬೇಡಿಕೆಯಿದೆ.

"ತೆರೆಯ ಗೆಜ್ಜೆ ಹಸುರು ಸೀರೆ
ನದಿಸರ ಹಿಮಮುಡಿಯ ಸ್ಫೂರ್ತಿ!

ಆದ ಈ ಭಾರತದಲ್ಲಿ

ಮೂಡುವನೆಂದೀ ಭಾರತ
ಭಾಗ್ಯ ಭಾಸ್ಕರಂ?
ಮರಳುವುದೆಂದೆಮಗಗಲಿದ
ಸ್ವತಂತ್ರಮತಿಯಶಸ್ಕರಂ?

ಹಾಗಾಗಿ ನಮ್ಮ ನಾಡಿಗೆ ಬಿಡುಗಡೆಯನ್ನು ಕೊಡು ಎಂದು ಕವಿ ಜಗದೊಡೆಯನೊಡನೆ ಕೇಳಿಕೊಳ್ಳುವರು.)

"ಕವಿ ಮತ್ತು ವಿಮರ್ಶಕ" ಎಂಬ ಪದ್ಯದಲ್ಲಿ ಕವಿ ಮತ್ತು ವಿಮರ್ಶಕರ ಸಂಬಂಧ ಹೇಗಿರಬೇಕೆಂದು ತಿಳಿಸಿ, ಕಾವ್ಯಗಳನ್ನು ಬರೆಯದೆ ಕೇವಲ ವಿಮರ್ಶೆ ಮಾತ್ರ ಮಾಡುವಂತಹವನು—

"ಹೆತ್ತರಿಯದ ಬಂಜೆ ಸೂಲಗಿತ್ತಿಯೆ ಜಗದಿ"

ಎಂದು ಪ್ರಶ್ನಿಸಿರುವರು. ಕೇವಲ ಲೆಕ್ಕಣಿಕೆ ಹಿಡಿದು ಕುಳಿತ ಸಾಮರ್ಥ್ಯದಿಂದ ಕಾವ್ಯವನ್ನು ಒಳಗರಿಯದೆ ಟೀಕಿಸುವ ವಿಮರ್ಶಕರಿಗೆ ಇದೊಂದು ಹಿತೋಕ್ತಿಯಾಗಿದೆ.

'ಉಂಟು' ಎಂಬ ಒಂದು ನಾಲ್ಕೇ ಚರಣದ ಪದ್ಯದಲ್ಲಿ—

"ನಿನಗೆಟಕದೆಮುಗುಳಿವುದೇನಾನುಮುಂಟೆ?
'ಉಂಟು': ಕವಿಗೊಳಕವಿಯಿನೊಗೆತಂದ ಕವಿತೆ."

ಎಂಬ ರಹಸ್ಯವೊಂದನ್ನು ತಿಳಿಸಿರುವರು.

"ಎಲ್ಲಿ?" ಎಂಬುದೂ ನಾಲ್ಕೇ ಚರಣದೊಂದು ಪದ್ಯ. ತನ್ನಂತೆ ಎಲ್ಲಾ ಜೀವಿಗಳು ಎಂದು ತಿಳಿದವರು, ಎಲ್ಲಾ ಧರ್ಮಗಳಲ್ಲಿಯೂ ಏಕ ಈಶ್ವರನನ್ನು ಕಂಡವರು, ತಾಯ್ನಾಡಿಗಾಗಿ ಬಾಳ್ತಳೆದೂ ಬಾಳ್ಗಳೆದೂ ಬದುಕಿದವರು—

'ಬೆಳ್ಳಿಯ ಬೆಟ್ಟಮಿಂಗಡಲವೆಲ್ಲಿವರೆಲ್ಲಿಹರಲ್ಲಿಯಲ್ಲಡೆ?'

ಎಂದು ಅಂತಹವರ ನೆಲೆ ಅತ್ಯಂತ ಉನ್ನತವೂ, ಅಸಾಮಾನ್ಯವೂ ಆಗಿದೆ ಎಂದು ಸಾರಿರುವರು.

"ಉಮರ್ ಖಯ್ಯಾಮ್" ಇದರಲ್ಲಿನ ಇನ್ನೊಂದು ಪ್ರಸಿದ್ಧ ಹಾಡು. ಉಮರನ ಕಾವ್ಯ ವಾಣಿಯನ್ನು ಮೊದಲಾಗಿ ಕನ್ನಡಿಗರಿಗೆ ಕೇಳಿಸಿದವರು ಶ್ರೀ। ಗೋವಿಂದ ಪೈಗಳು. ಪ್ರಾರಂಭದಲ್ಲಿ ಉಮರ ಕಾವ್ಯದ ಸ್ವಲ್ಪ ಪರಿಚಯವು ಕೊಡಲಾಗಿದೆ. ಒಟ್ಟು ೭೫ ಪದ್ಯಗಳಿದರಲ್ಲಿವೆ. ಉಮರನ ಕುರಿತು ಇಲ್ಲಿ ಒಂದು ಇಂಗ್ಲಿಷ್ ಕವಿತೆ-ಶ್ರೀ। ಗೋವಿಂದ ಪೈಗಳೇ ಬರೆದುದು ಕೊಡಲಾಗಿದೆ.

ಕೊನೆಗೆ ಈ ಗಿಳಿವಿಂಡು ಕವನ ಸಂಗ್ರಹವನ್ನು ಕವಿ "ನನ್ನ ಕೃಷ್ಣೆಗೊ ನನ್ನ ಕೃಷ್ಣನಿಗೊ ವ್ಯಕ್ತಿದ್ವಯಗಳದ್ವಯಕೊ ಕೃಷ್ಣಾರ್ಪಣ" ಎಂದಿದ್ದಾರೆ. ಇದಿಷ್ಟು ಗಿಳಿವಿಂಡಿನ ಬಹು ಸ್ಥೂಲವಾದ ಪರಿಚಯ. ಕೇವಲ ಪ್ರವೇಶ ಮಾತ್ರ.

೩

'ಗೊಲ್ಗೊಥಾ' ಕವಿತೆ ೧೯೩೧ರ ಸಾಲಲ್ಲಿ ರಚಿತವಾದುದು. ಕನ್ನಡ ಸಾಹಿತ್ಯ, ಜೈನ ಲಿಂಗಾಯತ ಮೊದಲಾದ ಹಿಂದೂ ಪುರಾಣಗಳ ಕಥೆಗಳಿಂದಲೇ ತುಂಬಿದ್ದು ನಾವೀನ್ಯತೆಯಿಲ್ಲದೆ ನರಳುತ್ತಿರುವುದನ್ನು ನಾವಿಂದಿಗೂ ನೋಡುತಿದ್ದೇವೆ. ಇಂತಹ ಸಂದರ್ಭದಲ್ಲಿ ಆಂಗ್ಲ ಸಾಹಿತ್ಯವನ್ನು ಅಭ್ಯಾಸ ಮಾಡಿದವರು ಹೊಸ ಧಾಟಿಯಲ್ಲಿ ಕೆಲವು ಕಾವ್ಯಗಳನ್ನು ಬರೆದರೂ, ಪ್ರಪಂಚದಲ್ಲಿ ವಿಖ್ಯಾತ ಪುರಾಣವೂ ಸಾಹಿತ್ಯವೂ ಎನಿಸಿದ

ಬೈಬಲಿನ ಆಧಾರದಿಂದ ಕನ್ನಡ ಸಾಹಿತ್ಯಸತ್ವವನ್ನು ಹೆಚ್ಚಿಸಲು ಪ್ರಯತ್ನಿಸಿದವರು ಬಹಳ ಕಡಿಮೆ. ಇಂತಹ ಲೋಪವನ್ನು ಹೋಗಲಾಡಿಸಿ ಕ್ರಿಸ್ತಪುರಾಣವನ್ನೆತ್ತಿಕೊಂಡು ಒಂದು ಉತ್ತಮಕಾವ್ಯ ಬರೆದವರಲ್ಲಿ ಮೊದಲಿಗರೂ ಅದ್ವಿತೀಯರೂ ಆದವರು ಶ್ರೀ। ಗೋವಿಂದ ಪೈಗಳು

''ಗೊಲ್ಗೊಥಾ'' ಏಸುವಿನ ಕಡೆ ದಿನದ ಕುರಿತು ಬರೆದೊಂದು ಖಂಡಕಾವ್ಯ. ಇದರ ಕಥೆ ಇಂತಿದೆ:

'ಯೇಸುವನ್ನು ಆತನ ಹಗೆಗಳಾದ ಯೆಹೂದ್ಯರು ಹಿಡಿತಂದು ಕೈಸರನ ಪ್ರತಿನಿಧಿ ಪಿಲಾತನರಮನೆಗೆಕೊಂಡೊಯ್ದು, ಆತನು ಅಪರಾಧಿಯೆಂದು ದೂರಿತ್ತರು; ಪಿಲಾತನು ಯೇಸುವನ್ನು ಮಾತನಾಡಿಸಲು ಯತ್ನಿಸಿದರೂ ಆತನು ಒಂದೆರಡೇ ಮಾತನಾಡಿದನು. ಆಗ ಪಿಲಾತನು ಆತನಲ್ಲಿ ಏನೂ ತಪ್ಪಿಲ್ಲವೆಂದೂ ಬಿಡುಗಡೆ ಮಾಡುವುದು ಉಚಿತವೆಂದೂ ಹೇಳಲು ಅಲ್ಲಿ ನೆರೆದ ಜನಸಮೂಹವು, ಯೇಸುವನ್ನು ಗಲ್ಲಿಗೇರಿಸಬೇಕೆಂದು ಕೂಗಾಡಿತು. ಪಿಲಾತನ ಹೆಂಡತಿ ತನಗಾದ ಕನಸಿನ ಕುರಿತು ಹೇಳಿ ಯೇಸುವನ್ನು ಬಿಟ್ಟುಬಿಡಬೇಕೆಂದರೂ ಹಿಂದೆ ಯೆಹೂದ್ಯರನ್ನು ನೋಯಿಸಿದುದಕ್ಕಾಗಿ ಕೈಸರನಿಂದ ತನಗೆ ಎಚ್ಚರಿಕೆ ದೊರಕಿದುದನ್ನು ನೆನೆದು ಧೈರ್ಯಗುಂದಿ ಪಿಲಾತನು ಈ ನಿರಪರಾಧಿಯನ್ನು ಕೊಂದ ಪಾಪಕ್ಕೆ ಹೊಣೆ ನಾನಲ್ಲ ಎಂದು ಹೇಳುತ್ತಿದ್ದಂತೆ, ಆ ಜನಸಮೂಹವು ಅದಕ್ಕೆ, ''ನಾವೂ ನಮ್ಮ ಮಕ್ಕಳೂ ಹೊಣೆ''ಯೆಂದು ಚೀರಾಡುತ್ತಿರಲು, ಯೇಸುವಿಗೆ ಮರಣದಂಡನೆ ವಿಧಿಸಿ ಪಿಲಾತನು ಆತನನ್ನು ಸೈನಿಕರಿಗೆ ಒಪ್ಪಿಸಿದನು. ಸೈನಿಕರು ಆತನಿಗೆ ಕೆಂಬಟ್ಟೆ ಹೊದಿಸಿ, ತಲೆಗೆ ಮುಳ್ಳಿನ ಕಿರೀಟವಿಟ್ಟು, ಬಲಗೈಗೆ ಬೆತ್ತವಿತ್ತು ಮೊಣಕಾಲೂರಿ ಆತನ ಮುಖಕ್ಕೆ ಉಗುಳಿ ಬೆತ್ತದಿಂದ ಹೊಡೆದು ಅವನನ್ನು ಸಿಲುಬೆಗೇರಿಸಲು ಯೆರೂಸಲೇಮಿನ ಹೊರಗುಳ್ಳ ಗೊಲ್ಗೊಥಾ ಎಂಬ ಕಪಾಲಸ್ಥಾನಕ್ಕೆ ಕೊಂಡೊಯ್ದು ಕಳ್ಳರಿಬ್ಬರ ನಡುವೆ ಸಿಲುಬೆಗಿಕ್ಕಿದರು. ನೆರೆದ ಪಾಪಿಗಳು ಆತನನ್ನು ಬಾಯಿ ತುಂಬ ಅಣಕ ಮಾಡಿದರೂ ಯೇಸುವು ಅವರನ್ನು ಕ್ಷಮಿಸಬೇಕೆಂದು ದೇವರೊಡನೆ ಬೇಡಿಕೊಂಡನು. ಕತ್ತಲು ಕವಿಯಿತು; ಯೇಸು ತಂದೆಗೆ ಆತ್ಮವನ್ನೊಪ್ಪಿಸಿದನು. ಭೂಮಿ ಅದುರಿತು. ಪ್ರೇಕ್ಷಕರು ಮರುಗಿದರು. ಆತನ ಶಿಷ್ಯೆ-ಮಗ್ದಲದ ಮರಿಯೆ-ತುಸು ದೂರ ಇದ್ದುಕೊಂಡು ಸಿಲುಬೆಯಲ್ಲಿ ನೆಟ್ಟ

ಕಣ್ಣುಳ್ಳವಳಾಗಿ ಆತನ ಮುಖವನ್ನೇ ನೋಡುತಿದ್ದಳು. ಹುಣ್ಣಿಮೆಯ ಚಂದ್ರನು ಮೂಡಿದನು.

ಇಂತು ಈ ಕಥೆಯು ಮಹಾವಿಭೂತಿಪುರುಷನೊಬ್ಬನ ಜೀವನದ ಪುಣ್ಯ ಕಥೆ. ಸತ್ಯಕ್ಕಾಗಿ, ಪ್ರಾಣತೆತ್ತ ಮಹಾಪುರುಷನ ಕಥೆ. ವಿಶ್ವವಂದ್ಯ ಯೇಸುವಿನ ಮಹಾತ್ಮ್ಯಕ್ಕೆ ಸಲಬೇಕಾದ ಗೌರವ, ಗಾಂಭೀರ್ಯಗಳು ಇಲ್ಲಿನ ಪ್ರತಿಪಂಕ್ತಿಪದಗಳಲ್ಲಿ ಒಡಮೂಡಿವೆ. ಕಾವ್ಯಮಯವಾಣಿ ಹೊಸಲಾಗಿ ಹರಿದಿದೆ.

ಇಲ್ಲಿನ ಕೆಲವು ವರ್ಣನೆ, ಚಿತ್ರಗಳು ಆಯಾ ವ್ಯಕ್ತಿ ಸನ್ನಿವೇಶಗಳನ್ನು ಕಣ್ಣಮುಂದೆ ತಂದು ನಿಲ್ಲಿಸುವಂತಿವೆ. ಸೆರೆಹಿಡಿದ ಯೇಸುವನ್ನು ಕವಿ ಇಂತು ಚಿತ್ರಿಸಿದ್ದಾರೆ:

* * * * ನೀನೆಮ ನೋಡ!
"ಲೋಕದುರುಪಾಪಮಂ ಹೊತ್ತ ಕುರಿಮರಿಯಂತೆ,
ಗಿಡುಗಗಳ ನಡುವೆ ತೊಡರಿದ ಕಪೋತಕದಂತೆ,
* * * * ಹೆಣ್ಣಗೆಯ
ನಯನದಿ ಭವಿಷ್ಯಮಂ ತಿವಿವ ಪುರುಷನ ದೃಷ್ಟಿ,
ಹೆಣ್ಣೆದೆಯ ಮಾರ್ದವದಿ ಗಂಡಿನ ಮನೋದಾರ್ಢ್ಯ, * *
ಇಹಪರದ ನಡುವೆ ನೆಟ್ಟನೆಯ ನಿಶ್ರೇಣಿಯೆನೆ
ನಿಂದಿಹನ ನೋಡ! ದಿವ್ಯಜ್ಞಾನದೇಕಾಂತ
ದಾಡುಂಬೊಲವೊ ಪೃಥುಲಮಮಲಿನಲಲಾಟವದೊ
ನೋಡ! ಮಾರನ ತರಿದ ನಿಡುವಾಳೊ ನಾಸಿಕವೊ
ನೋಡ! ಮೊಗತುಳುಕುವಾತಂಬೆಳಕೊ ಪ್ರೇಮಾಂಬು
ನಿಧಿಯನುಬ್ಬರಿಸುವಮೃತಾಂಶುಕಾಂತಿಯೊ ನೋಡ!
ನೋಡ! ಗಲಿಲಾಯ ಸಾಗರದೊಲು ವಿಶಾಲವ
ಕ್ಷವನಂತೆ ಗಂಭೀರವಂತೆ ಪ್ರೇಮಾಧಾನ
ಹೃದಯವಂ ನೋಡ! ವಜ್ರದ ಹರಳೊಳಡಕವಾ
ಗಿರುವ ದ್ರವಾಗ್ನಿಯಂತಾಘಾಲಗುಲ್ಪಮಾ
ನಿಷ್ಪಟಬ್ರಹ್ಮಚರ್ಯದ ದೀಧಿತಿಯ ನೋಡ!

ಹೀಗೆ ವರ್ಣನೆ ಮುಂದುವರಿದಿದೆ. ಮುಂದೆ ಒಂದೆಡೆಯಲ್ಲಿ ತನ್ನ ಆತ್ಮವನ್ನು ಯೇಸು ದೇವರಿಗರ್ಪಿಸಿದನಂತರ ಪ್ರಕೃತಿಯಲ್ಲಾದ ವ್ಯತ್ಯಾಸ ವನ್ನು ಈ ರೀತಿ ವರ್ಣಿಸಿದ್ದಾರೆ:

ಮೆಲ್ಲ ಮೆಲ್ಲನೆ ತೆಗೆದುದಾ ಕತ್ತಲಾ ಪೋಡ,
'ಸುಳಿದುದೆಳೆಗಾಳಿ ಮುಚ್ಚಿದ ಕೋಳಿ ಹೊಗ ಹೊಂಚಿ
ಮುಂಬೆಳಕೊಳಂತೆ ಕೂಗಿತು, ಹಕ್ಕಿಗಳ ಹಿಂಡು
ಗೂಡು ಗೂಡಿಂದ ಹೊರಸೂಸಿತರೆಮೋವಿನೊಳೆ
ಕಂಗೆಟ್ಟ ಮಂದೆಯೊಟ್ಟಾಗಿ ಮರಳಿತು ಮನೆಗೆ.
ಅಂತು ಹಗಲಿನ ರಾತ್ರಿ ಪಾಳೆಯಂ ತೆಗೆಯೆ, ಪಡು
ವಣದಿ ರವಿ ಮೂಡಿ, ತನ್ನಿದಿರಿನೊಳೆ ಪಡುವೊಗಂ
ಗೊಂಡು ಧರ್ಮಪತಾಕೆಯಂತೆ ನಡುಸಿಲುಬೆಯುಲಿ
ಚಾಚಿದಪರಾರ್ಕನಂ ಕಂಡು ತಾನಸ್ತಮಿಸ
'ಲ್ಲಿ ನೆರೆದವರೆಲ್ಲ ಕತ್ತಲೆಯ ದಂಡೆಯಿಂ
ಹಿಂಡೆದ್ದ ಕೊಕ್ಕರೆಗಳಂತೆ ಗೊಲ್ಗೊಥದಿಂದ
ಮನೆಗೆ ತೆರಳಿದರಲ್ಲಿ ಸದ್ದಿಲ್ಲ! ಸುಳಿವಿಲ್ಲ!

ಪರಿಸ್ಥಿತಿಯ ಗಾಂಭೀರ್ಯ ಇಲ್ಲಿನ ಶಬ್ದಗಳಲ್ಲಿ ಅರ್ಥಗಳಲ್ಲಿ ಚೆನ್ನಾಗಿ ಎದ್ದು ಕಾಣುತ್ತದೆ.

ಗೊಲ್ಗೊಥಾದಲ್ಲಿನ ಕೆಲವು ಉಪಮಾಲಂಕಾರಗಳು ಅಸದೃಶವಾದವುಗಳು:

೧. "ನೇಸರಂ ಸೆರೆವಿಡಿದು ರಾತ್ರಿಗೊಪ್ಪಿಸುವ ಪೋಡದ ಗಡಣ ದಂತೆ, ಕೈಸೆರೆವಿಡಿದ ಯೇಸುವಂ ಕೈಸರನ ಪ್ರತಿನಿಧಿ ಪಿಲಾತನರಮನೆಗೆ" ಒಯ್ದರು.

೨. "ಹಳಗಿಪಡೆ ಹುಲಿಯು ಹಸಿವಿಗೆ ಹೋತನೀವಂತೆ"—ಯೆಹೂದ್ಯರ ನೆತ್ತರ ತೃಷೆಗೆ ಯೇಸುವನ್ನು ಪಿಲಾತನು ಬಲಿಯಿತ್ತನು.

೩. "ಹಿಂಡೊಡೆದು ಕಾಡಿನೊಳಗಂಡಲೆವ ಕುರಿಮರಿಯು ಕಂಡುಬ್ಬಿ ತೋಳಗಳ ಗುಂಡೂಳುವಂತೆ"—ಯೆಹೂದ್ಯರು ಆರ್ಭಟಿಸಿದರು.

೪. "ಕಾಗೆಗಳ ಕೊತ್ತಲಂ ಕುಕ್ಕುವೆಳಕುಕಿಲಂತೆ ಕೆಂಡಗಳ

ಕೋವೆಯಲಿ ಕಾವ ಕಾಂಚನದಂತೆ, ಮಂಜು ಮುಸುಕಿರುವ ಬೈಗಿನ ಬಳ್ಳಿಯಂತೆ" ಯೇಸು ಶಿಲುಬೆಯ ಎಲ್ಲಾ ಹಿಂಸೆಗಳನ್ನು ಸಹಿಸಿಕೊಂಡನು.

೫. "ಹದ್ದು ಬಿಗಿವಿಡಿದ ಲಾವಿಗೆಯಂತೆ, ಪಡುವಣದಿ ಬೆಳಿಯ ಬಿದಿಗೆಯ ತಿಂಗಳಂತೆ, ಬಿಲ್ಲಿಗೆ ತೊಟ್ಟ ಸರಳಂತೆ, ಮರಣವೃಕ್ಷದೊಳಮೃತ ಫಲದಂತೆ"—ಯೇಸು ಶಿಲುಬೆಯಲ್ಲಿ ತೂಗುತಿದ್ದನು.

೬. "ತನ್ನ ಪಡೆದೆರವನೊಡೆಯಂಗೆ ಮರಳೀವಂತೆ, ತನ್ನ ತಂದೆಗೆ ಯೇಸುವಸುವನೊಪ್ಪಿಸಿದಂ".

ಹೀಗೆ ಒಂದಲ್ಲ ಎರಡಲ್ಲ ಹಲವಾರು ಸುಂದರ ಅಲಂಕಾರಗಳು ಅಲ್ಲಲ್ಲಿ ಕಾಣಬರುತ್ತವೆ ಕಥಾವಸ್ತು, ವರ್ಣನೆ, ಚಿತ್ರಣ ಅಲಂಕಾರ, ಶೈಲಿ ಇವುಗಳಲ್ಲೆಲ್ಲಾ ಈ ಕಾವ್ಯವು ಅಪೂರ್ವವಿದ್ದು ನೂತನವೂ ಶಾಶ್ವತವೂ ಆಗಿ ಉಳಿಯುತಕ್ಕುದಾಗಿದೆ

೪

ಶ್ರೀ। ಗೋವಿಂದ ಪೈಗಳ ಮುಂದಿನ ಕಾವ್ಯ—ದೃಶ್ಯ ಕಾವ್ಯ—'ಹೆಜ್ಜೆರಳು.' ಇದು ಏಕಲವ್ಯನ ಕಥೆ. ಇದನ್ನು ೧೯೪೬ರ ಸಾಲಿಗೆ ಬರೆದಿದ್ದಾರೆ. ಈ ನಾಟಕದ ಕಥಾವಸ್ತು ಮಹಾಭಾರತದಿಂದ ಉದ್ಧೃತವಾದುದು. ಆದರೆ ನಾಟಕಕ್ಕೆ ಕಳೆಯೇರುವಂತಹ ಕೆಲವು ಮಾರ್ಪಾಟುಗಳನ್ನು ಇಲ್ಲಿ ಮಾಡಿರುವರು. ಇದರ ಕಥೆ ಇಂತಿದೆ:

"ಹಸ್ತಿನಾವತಿಯಿಂದ ಸುಮಾರು ಹತ್ತು ಗಾವುದ ದೂರದ ಗಂಗೆಯ ತಡಿಯಲ್ಲಿನ ಭಿಲ್ಲರದೊಂದು ಹಳ್ಳಿಗಾಡಿನಲ್ಲಿ ತನ್ನ ಚಿಕ್ಕತಂದೆಯಾದ ಹಿರಣ್ಯಧನುವಿನ ಆಶ್ರಯದಲ್ಲಿ ಏಕಲವ್ಯನು ಬಳೆಯುತಿದ್ದು ಆತನಿಗೆ ಶಸ್ತ್ರವಿದ್ಯೆ ಕಲಿಯಬೇಕೆಂಬ ಕುತೂಹಲವಾಗಿ, ಅವನು ದ್ರೋಣಾಚಾರ್ಯನಲ್ಲಿಗೆ ಅದಕ್ಕಾಗಿ ತೆರಳುವ ಅಭಿಪ್ರಾಯವನ್ನು ತನ್ನ ಚಿಕ್ಕಪ್ಪನೊಡನೆ ಸೂಚಿಸಲು, ಆರ್ಯರಿಗೆ ಅನಾರ್ಯರ ಕುರಿತಿರುವ ಅನಾದರದ ವಿಷಯ ಹಿಂದೆಯೇ ಮನನೊಂದಿದ್ದ ಹಿರಣ್ಯಧನು ಮೊದಲು ಏಕಲವ್ಯನ ಮಾತಿಗೆ ಸಮ್ಮತಿ ಕೊಡಲೊಪ್ಪದಿದ್ದರೂ ಕೊನೆಗೆ ಅವನ ಆಗ್ರಹವನ್ನು ನೋಡಿ ಅವನನ್ನು ಬೀಳ್ಕೊಡುವನು. ಏಕಲವ್ಯನು ಹಸ್ತಿನಾವತಿಗೆ ತೆರಳಿ ಅರಮನೆಯಿಂದ ಕೊಂಚ ದೂರವಿರುವ ಗರಡಿಯ ಮನೆಯ ಬಳಿ ದ್ರೋಣಾಚಾರ್ಯನನ್ನು ಕಂಡು ಆತನೊಡನೆ ಶಸ್ತ್ರವಿದ್ಯಾಭ್ಯಾಸ ಮಾಡಿಸಬೇಕೆಂದು ಕೇಳಲು

ಅವನು ಅನಾರ್ಯನೂ, ಭಿಲ್ಲಶಾವಕನೂ ಆದ ಏಕಲವ್ಯನಿಗೆ ವಿದ್ಯೆ ಕಲಿಸುವುದು ತನ್ನ ಸಮಾಜದ ಸಂಪ್ರದಾಯಕ್ಕೆ ಸಲ್ಲದೆಂದು ಅಲ್ಲಗಳೆದ ಮೇಲೆ, ಏಕಲವ್ಯನು ಹಿಂತೆರಳುವ ಸಂದರ್ಭದಲ್ಲಿ ದ್ರೋಣಾಚಾರ್ಯನು ಅವನಿಗಿತ್ತ ಆಶೀರ್ವಾದ ಬಲದಿಂದ ಏಕಲವ್ಯನು ತನ್ನ ಊರಿಗೆ ಹೋಗಿ ಅಲ್ಲಿ ದ್ರೋಣನ ಪ್ರತಿಮೆಯನ್ನು ಮಾಡಿ ಧನುರ್ವಿದ್ಯೆಯನ್ನು ಕಲಿತು ಪಾರಂಗತನಾದನು. ಒಂದಾನೊಂದು ದಿನ ಏಕಲವ್ಯನ ಶಸ್ತ್ರವಿದ್ಯಾನೈಪುಣ್ಯವನ್ನು ಕಂಡ ದ್ರೋಣನ ಪ್ರೀತಿಯ ಶಿಷ್ಯನಾದ ಅರ್ಜುನನು ತನ್ನ ಗುರುವಿಗೆ ತನಗಿಂತಲೂ ನಿಪುಣನಾದ ಶಿಷ್ಯನಿರುವನೆಂದರಿತು ಮತ್ಸರಿಸಿದ ಕಾರಣ, ದ್ರೋಣಾಚಾರ್ಯನು ಏಕಲವ್ಯನ ಹೆಬ್ಬೆರಳನ್ನು ಗುರುಕಾಣಿಕೆಯಾಗಿ ಕೇಳಿ ಪಡೆದನು.

ಇಂತಹ ರೋಮಾಂಚಕ ಸನ್ನಿವೇಶವನ್ನೆತ್ತಿಕೊಂಡು ಈ ನಾಟಕವು ಚಿತ್ರಿತವಾಗಿದೆ. ''ಹೆಬ್ಬೆರಳು'' ನಾಟಕದ ಲಕ್ಷಣ, ಭಾಷಾ ಸೌಂದರ್ಯ ಇವು ರಸಿಕರ ಮನ ಸೆಳೆಯುವಂತಿವೆ. ಮೊದಲ ಓದಿಗೆ ತುಸು ಬಿಗುವೆನಿಸಿದರೂ ಓದಿ ಅರ್ಥ ಮಾಡಿಕೊಂಡರೆ ಮತ್ತೆ ಮರೆಯುವಂತೆಯೇ ಇಲ್ಲ. ಇಲ್ಲಿನ ಕೆಲವು ಉಪಮೆ, ಅರ್ಥಾಂತರನ್ಯಾಸಾಲಂಕಾರಗಳು ಬಹಳ ರಮಣೀಯವಿವೆ:

೧. "ಮರಿಹುಲಿಗೆ ಸಹಜದ ಬಣ್ಣ ಬಹಮುನ್ನ ಬಸಿರು ನೋವಂತೆ" —ಏಕಲವ್ಯನ ಮನಸ್ಸು ಶಸ್ತ್ರವಿದ್ಯೆಯಲ್ಲಿಯೆ ಆತುರಗೊಳ್ಳುತ್ತದೆ.

೨. ''ಮರವ ತಾಯ್ಬೇರು ಪೊರೆವಂತೆ"—ಹಿರಣ್ಯಧನು ಭಿಲ್ಲರನ್ನು ಪೊರೆಯುವನು.

೩. 'ಮಣಿಯಂ ನಾಗನಂತೆ, ನಾಲಗೆ ರುಚಿಯನೆಂತಂತೆ'-ಹಿರಣ್ಯಧನು ತನ್ನಣ್ಣನ ಮಗನಾದ ಏಕಲವ್ಯನನ್ನು ಜೋಪಾನಗೈದು ಬೆಳೆಸುವನು.

೪. 'ರಾಸಭಕ್ಕೀಯಲೆ ಪುರೋಡಾಶ? ಭೂನಾಗಕಮವು ಮಾನಾಗಗಳ ಸಂಗತಿಯೆ?'-ಎಂದು ದ್ರೋಣನು ಭಿಲ್ಲರಿಗೆ ವಿಪ್ರರಾಚಾರ್ಯತೆಯು ಸಲ್ಲದೆನ್ನುವನು. ಆ ಮಾತಿಗೆ ಏಕಲವ್ಯನು,

ಬೆಂಕಿ ತಳೆಯದೆ ಹೊಗೆಯ? ಬೆಟ್ಟ ತಾಳದೆ ಹುಲ್ಲ?
ಗಂಗೆಗೆರೆದಾ ಹೆಂಡ ಗಂಗೆಯಾಗದೆ ದೇವ?'

ಎಂದು ಪ್ರಶ್ನೆ ಕೇಳಿ ದ್ರೋಣನನ್ನು ಬೆರಗುಗೊಳಿಸಿಬಿಡುವನು. ಇಂತು ಅಲ್ಲಲ್ಲಿ ಹಲವು ಸುಂದರ ಅಲಂಕಾರಗಳನ್ನು ಕಾಣಬಹುದು.

ಕವಿಗಳು ದ್ರೋಣಾಚಾರ್ಯನ ಬಾಯಿಯಿಂದ ಒಂದು ಭವಿಷ್ಯವಾಣಿ ಹೇಳಿ ಎಚ್ಚರಿಸಿದ್ದಾರೆ:

"ಅಕಟ ಭಾಸಿಪುದು ಭಾರತಭೂಭವಿಷ್ಯವತಿ
ಘೋರಾಂಧಕಾರಮಯವಾಗಿ * *
* ವಿದ್ವೇಷವಿಾರ್ಷ್ಯೆ ಜಾತ್ಯಭಿಮಾನ
ಮುತ್ತಮಾಧಮರೆಂಬ ಭೇದ ಕೈವಿಾರುತಿವೆ!
* + ನಾವಚಿರಾದನಾರ್ಯರನ್ನಿನ್ನಾರ್ಯ
ಜಾತಿಯಲಿ ಹೀರಿಕೊಂಬುದೆ ಸಮಂಜಸವೈಸೆ
ಇಂದದೆಮ್ಮಯ ಧರ್ಮವೈಸೆ ಕಾರ್ಯವದೈಸೆ
* * ಆದಡಾಃ ಕಿವಿಗುಡುವರಾರೀ ಅರಣ್ಯ
ರುದಿತಕೆ? ಮಹಾ ಯುದ್ಧವಿನ್ನಾಗದೀ
ಸೆಣಸಾಟ ತೀರುವಂತಿಲ್ಲ, ನಾವವರೊಡನೆ ಸೇರುವಂತಿಲ್ಲ"

ದ್ರೋಣಾಚಾರ್ಯನ ಈ ಮಾತು ಇಂದಿನ ಕಾಲಕ್ಕೆ ಬಹಳವಾಗಿ ಅನ್ವಯಿಸುತ್ತದೆ.

ಮುಂದೆ ಗುರುಕಾಣಿಕೆಯಾಗಿ ಏಕಲವ್ಯನು ಹೆಬ್ಬೆರಳನ್ನು ಕಡಿದು ಕೊಟ್ಟ ಸಂದರ್ಭ ಕಣ್ಣೀರ ಕಾಲುವೆಯನ್ನೇ ಹರಿಸುತ್ತದೆ. ಹಿರಣ್ಯಧನು ದ್ರೋಣರ ಅಂತಸ್ತಾಪಗಳು, ನಾಟಕದ ಉದ್ದಕ್ಕೂ ಬಂದಿರುವ ಆರ್ಯ ಅನಾರ್ಯ ಭೇದಗಳು ನಾಟಕದ ರಮಣೀಯತೆಗೆ ಒಳ್ಳೆಯ ಹಿನ್ನಲೆಯನ್ನು ಕೊಟ್ಟಿವೆ. ಇಂತು ಈ ದೃಶ್ಯಕಾವ್ಯವು ಕನ್ನಡ ಸಾಹಿತ್ಯದ ಒಂದು ಉತ್ತಮ ಕೃತಿ. ಶ್ರೀಗಳಾದ ಕೈಲಾಸಂ, ಪುಟ್ಟಪ್ಪ ಇವರು ಏಕಲವ್ಯನ ಕುರಿತು ಉಜ್ವಲ ಕೃತಿಗಳನ್ನು ರಚಿಸಿದ್ದರೂ ಈ ಕೃತಿ-ಹೆಬ್ಬೆರಳು-ರಸಿಕರನ್ನು ಮತ್ತಷ್ಟು ತಲೆದೂಗಿಸುತ್ತಿದೆಯೆಂಬುದು ನಿರ್ವಿವಾದ.

ಹೆಬ್ಬೆರಳು ನಾಟಕದ ಕೊನೆಯಲ್ಲಿ, ಕವಿ ತನ್ನ ಕಾವ್ಯಧ್ಯೇಯವನ್ನು, ಇಂದಿನ ಯುಗವಾಣಿಯನ್ನು ಈ ರೀತಿಯ ಸಂದೇಶರೂಪವಾಗಿ ಸಾರಿದ್ದಾರೆ:

ಪೆರರ ತಮ್ಮನ್ನ ತಿಕೆಗೆತ್ತಿಕೊಂಬುದೆ ಮಹಾ
ತ್ಮರ ಧರ್ಮ! ಪರರನಡಿಮೆಟ್ಟಿ ದೂರೀಕರಿಸು
ವುದೆ ದುರಾತ್ಮರ ಕರ್ಮ! ನಾವು—ನೀವೆಂಬ ಹಳೆ
ಭೇದಗಳನುಳಿದು ಸರಿಸಮನೆ ಸೌದರ್ಯದಿಂ
ಸೌಹಾರ್ದದಿಂದೈಕ್ಯದಿಂದೈಕಮತ್ಯದಿಂ
ಬಾಳುವುದೆ ತಾಯಿಳೆಯ ಹೆಬ್ಬಾಳಿಕೆಯಮರ್ಮ!
ಇಲ್ಲಡಾವನ್ಯಸಸ್ಯಾಳಿಯುಂ ತನ್ನೊಳಗೆ
ಬೆಳೆಯಲೀಯದ ಬಿದಿರುಮಳೆ ತನ್ನ ತಿಕ್ಕಾಟ
ದಿಂದಸೀವಂತೆ, ಒಳಯುದ್ಧದಿಂದಲೊ, ದೇಹ
ದಾರೋಗ್ಯ ಸಡಿಲಲೊಳವೊಗುವ ರೋಗಗಳಂತೆ
ಒಳಗುಂದುವೊಡನೆತ್ತಿ ಬಹ ಹೊರಗಣಭಿಯೋಗ
ದಿಂದಲೊ, ಸಮಾಜ ಹರಿಮುರಿಯಾಗದಿರೆ ಸಲ್ಲ!
ಮಾತೃಭೂ ಪರತಂತ್ರವಾಗದಿರದಕಟೊಲ್ಲ!
ಸತ್ಯಂ, ತ್ರಿಸತ್ಯಂಗಡಾ ಇದರೊಳೆರಡಿಲ್ಲ!

ಈ ಕಾವ್ಯವಾಣಿ ತ್ರಿಕಾಲಾಬಾಧಿತವಾದ ಸತ್ಯ! ಹಿಂದೆ ಆರ್ಯರು—ಅನಾರ್ಯರು ಹೋರಾಡಿಕೊಂಡರು; ದೇಶದ ಐಕ್ಯ ಕೆಡಿಸಿದರು. ನಾವು-ನೀವೆಂದು, ಹಿಂದೂ ಮುಸ್ಲಿಮರೆಂದು ಜಗಳಾಡುವೆವು; ಚತುರ್ವರ್ಣಗಳಲ್ಲಿ ಭೇದವನ್ನೆಣಿಸುವೆವು; ಹರಿಜನರನ್ನು ಹೊಲೆಯರೆಂದು ದೂರ ಮಾಡುವೆವು; ಮಾತೃಭೂ ಹೀಗಾದರೆ ಪರತಂತ್ರವಾಗದೆ ಉಳಿದೀತೆ? ಅದು ಬಿಟ್ಟು ಐಕ್ಯದಿಂದ ಬಾಳುವುದೇ ನಮ್ಮ ತಾಯಿಳೆಯ ಹೆಬ್ಬಾಳಿಕೆಯ ಮರ್ಮವಲ್ಲವೆ?

೫

ವೈಶಾಖಿ, ಗೊಲ್ಗೊಥಾ ಮಾದರಿಯ ಕಾವ್ಯ. ಇದನ್ನು ೧೯೪೭ರ ಸಾಲಿಗೆ ರಚಿಸಿದ್ದಾರೆ. ಗೊಲ್ಗೊಥಾದಂತೆ ಇದರಲ್ಲಿಯೂ ಲೋಕದ ಒಬ್ಬ ಮಹಾ ವಿಭೂತಿ ಪುರುಷನ ಅಂತಿಮ ದರ್ಶನವಾಗುತ್ತಿದೆ. ಗೊಲ್ಗೊಥಾದಲ್ಲಿ ಯೇಸುವಿನ ಅಕಾಲ ಮರಣ ಚಿತ್ರವಿದ್ದರೆ, ಇಲ್ಲಿ ಬುದ್ಧನ ತುಂಬಿದಾಯುಷ್ಯದ ಕೊನೆಯನ್ನು ಚಿತ್ರಿಸಲಾಗಿದೆ; ಇದರ ಕತೆ ಇಂತಿದೆ:

"ಪಾವೆಯೆಂಬ ಊರಲ್ಲಿ ಬುದ್ಧನು ತನ್ನ ೮೦ನೇ ವರ್ಷ ತುಂಬುವ ಒಂದೆರಡು ದಿನಗಳ ಮುನ್ನ ಚುಂದನೆಂಬ ಕಮ್ಮಾರನ ಮನೆಯಲ್ಲಿ 'ಸೂಕರ ಮದ್ದವ'ವನ್ನು ಉಂಡನು. ಅಲ್ಲಿಂದ ಆತನಿಗೆ ಸಹನಾತೀತವಾದ ಆಮ ಶಂಕೆರೋಗ ತೊಡಗಿ, ತನ್ನ ೮೦ನೇ ವರ್ಷ ತುಂಬುವ ವೈಶಾಖಪೂರ್ಣಿಮಿಯ ದಿನ ತಾನು ಪರಿನಿರ್ವಾಣ ಹೊಂದುವೆನೆಂದು ತನ್ನ ಶಿಷ್ಯರಿಗೆ ಅರುಹಿ ಅಲ್ಲಿಂದ ಹೊರಟು 'ಕುಶಿನಾರ'ದ ಹಾದಿ ಹಿಡಿದನು. ದಾರಿಯಲ್ಲಿ ತನ್ನ ಪ್ರೀತಿಯ ಶಿಷ್ಯನಾದ ಆನಂದನಿಂದ ನೀರು ತರಿಸಿಕೊಂಡು ಕುಡಿದು ಒಂದು ಮರದ ಬುಡದಲ್ಲಿ ಕುಳಿತಿರಲು ಪುಕ್ಕಸನೆಂಬ ಮಲ್ಲನು ಅಲ್ಲಿಗೆ ಬಂದು ಆತನಿಂದ ಧರ್ಮೋಪದೇಶ ಹೊಂದಿ ಆತನಿಗೆ ಎರಡು ಹೊಂಬಟ್ಟೆಗಳನ್ನು ಕಾಣಿಕೆ ಯಾಗಿತ್ತನು. ಬುದ್ಧನು ಅಲ್ಲಿಂದ ಮುಂದುವರಿದು ಕಕುತ್ಥಾ ನದಿಯಲ್ಲಿ ಮಿಂದು ಬಳಿಯಲ್ಲಿದ್ದ ಅಮ್ರುತವನವನ್ನು ಹೊಕ್ಕು ಅಲ್ಲಿ ವಿಶ್ರಮಿಸುತಿದ್ದಾಗ, ಚುಂದನು ಬಡಿಸಿದ ಸೂಕರ ಮದ್ದವವು ತನಗೆ ಕೊನೆಯ ತುತ್ತಾಯಿತೆಂದು ಆತನನ್ನು ದೂರದಿರಿ ಎಂದು ಬಿಕ್ಷುಗಳಿಗೆ ಬೋಧಿಸಿ, ಅಲ್ಲಿಂದ ಮುನ್ನಡೆದು "ಕುಶಿನಾರ" ದಲ್ಲಿರುವ ಮಲ್ಲರ ಸಾಲವನಕ್ಕೆ ಹೋಗಿ. ಅಲ್ಲಿ ಉತ್ತರಶೀರ್ಷವಾಗಿ ಮಲಗಿದ ವನು ಮತ್ತೆ ಏಳಲಿಲ್ಲ. ಬುದ್ಧನು ಹಾಗೆ ಮಲಗಿದ್ದಾಗ ಆನಂದನು ಕೇಳಿದ ಕೆಲವು ಪ್ರಶ್ನೆಗಳಿಗೆ ಉತ್ತರವಿತ್ತು, ಸದರ್ಥದಲ್ಲಿ ಪ್ರವೇಶಿಸಬೇಕೆಂದು ಭಿಕ್ಷು ಗಳಿಗೆ ಬೋಧಿಸಿ, ತನ್ನ ಪರಿನಿರ್ವಾಣಕ್ಕೆ ಕುಶಿನಾರವೇ ಯೋಗ್ಯಸ್ಥಳವೆಂದು ಆನಂದನನ್ನು ಸಮಾಧಾನಪಡಿಸಿ, ಅಲ್ಲಿಯ ಮಲ್ಲರಿಗೆ ಧರ್ಮೋಪದೇಶವನ್ನು ಮಾಡಿದನು. ಆಗ ಕುಶಿನಾರದಲ್ಲಿದ್ದ ಸುಭದ್ರನೆಂಬ ಪರಿವ್ರಾಜಕನು ಬುದ್ಧನ ದರ್ಶನಾಕಾಂಕ್ಷಿಯಾಗಿ ಬಂದು, ತನಗೆ ಬುದ್ಧನನ್ನು ಕಾಣಿಸಬೇಕೆಂದು ಆನಂದನೊಡನೆ ಬೇಡಲು, ತೀರಾ ದಣಿದಿರುವ ಕಾರಣ ಅದು ಸಲ್ಲದೆಂದು ಹೇಳಿದ ಆನಂದನ ಮಾತನ್ನು ಆಲಿಸಿದ ಬುದ್ಧನು ಅವನನ್ನು ಬಳಿಗೆ ಬರಹೇಳಿ ಅವನಿಗೆ ಉಪದೇಶವಿತ್ತು ತನ್ನ ಕೊನೆಯ ಉಪದೇಶ ಹೇಳಿಮುಗಿಸಿ ಧ್ಯಾನ ಮಗ್ನನಾಗಿ ವೈಶಾಖಪೂರ್ಣಿಮಿಯ ರಾತ್ರಿ ಕೊನೆಯ ಜಾವದಲ್ಲಿ ಪರಿ ನಿರ್ವಾಣ ಹೊಂದಿದನು. ಒಡನೆ ಭೂಕಂಪವಾಯಿತು. ದೇವದುಂದುಭಿ ಮೊಳಗಿತು, ಮೇಘನಿರ್ಘೋಷವಾಯಿತು, ವಿದ್ಯುತ್ ಅವಿರ್ಭವಿಸಿತು. ಮಳೆ ಸುರಿಯಿತು. ಆಗ ಬ್ರಹ್ಮ, ದೇವೇಂದ್ರ, ಅನಿರುದ್ಧ, ಆನಂದರು ಆ ಮಹಾ

ಘಟನೆಯ ಗಾಥೆಗಳನ್ನು ಉದ್ಗಾರಿಸಿದರು. ಭಿಕ್ಷುಗಳು ಮಿಕ್ಕ ರಾತ್ರಿಯನ್ನು ಧರ್ಮಕಥಾಪ್ರಸಂಗದಲ್ಲಿ ಕಳೆದರು."

ಈ ಕಾವ್ಯಭಾಗವನ್ನು ಬೌದ್ಧ ಧರ್ಮಗ್ರಂಥವಾದ, ಪಾಲಿಭಾಷೆಯ "ಮಹಾಪರಿನಿಬ್ಬಾನಸುತ್ತ"ದಿಂದ ಎತ್ತಲಾಗಿದೆ. ಕನ್ನಡದಲ್ಲಿ ಬೌದ್ಧ ಪುರಾಣವೆನ್ನತ್ತಿ ಬರೆದ ಕಾವ್ಯಗಳು ಕಡಿಮೆಯೇ. ಇತ್ತೀಚೆಗೆ ಶ್ರೀ। ರಾಜರತ್ನಂರವರು ಕೆಲವು ಜಾತಕಕಥೆಗಳನ್ನು ಕನ್ನಡದಲ್ಲಿ ಅನುವಾದಮಾಡಿದ್ದರೂ ಈ ತೆರನ ಕಾವ್ಯಕೃತಿ ಇದೇ ಮೊದಲಿನದ್ದು. ಮತ್ತು ಅಪ್ರತಿಮವಾದುದು. ಗೊಲ್ಲೊಥಾದಂತೆ ಇದೂ ಒಂದು ನೂತನವೂ ಶಾಶ್ವತವೂ ಆದ ಕಾವ್ಯವಾಗಿದೆ.

ಇದರಲ್ಲಿನ ಕೆಲವು ವರ್ಣನೆಗಳು ಗೊಲ್ಗೊಥಾದ ವರ್ಣನೆಯನ್ನೇ ಹೋಲುತ್ತವೆ. ಬುದ್ಧನ ವರ್ಣನೆ ಹೀಗಿದೆ:

"ಬಾರೆನ್ನ ಮನಸೆ ನೋಡಲ್ಲಿ ಮರದಡಿಯಲ್ಲಿ
ಕುಳಿತಿಹ ತಥಾಗತನ ನಸುಕಿನಲ್ಲಿ ನಸು ಮುನ್ನ
ಮುಸುಕಿದಾ ಸುಗತನನ್ನೀಗ ನೆಟ್ಟನೆ ನೋಡ!
ವರುಷವೆಂಬತ್ತಂತೆ, ಇಂದೆ ತುಂಬಿತ್ತಂತೆ.
ತೊಗಲನಿತು ಸಡಲಿಲ್ಲ, ನವಿರನಿತು ನರೆತಿಲ್ಲ,
ದನಿಯಣಂ ಕುಗ್ಗಿಲ್ಲ, ಹುರಿಯಣಂ ಬಗ್ಗಿಲ್ಲ,
ಕಣ್ಣಾಲಿ ಬೆಳತಿಲ್ಲ, ಹಲ್ಲೊಂದುಮುದುರಿಲ್ಲ,
ನೋಡ, ನಂದ್ಯಾವರ್ತ ತರುವಂತೆ * * *
ಅಪರ ಭಾನುವಾಳ್ದಪನು ನಿಬ್ಬಯಲೊಳಗೆ ನೋಡ!'

ಇಲ್ಲಿ ಬುದ್ಧನ ವರ್ಣನೆ ಗೊಲ್ಗೊಥಾದ ಕ್ರಿಸ್ತನ ವರ್ಣನೆಯನ್ನು ಸರಿಸಮಾಗಿ ಹೋಲುತ್ತಿದ್ದು ರಮ್ಯವಾಗಿದೆ.

ಕುಶಿನಾರದ ಪಾವೆಗೆ ಹೋಗುವ ಪುಕ್ಕಸ ಮಲ್ಲನು ಭಗವಂತನೊಡನೆ ಧರ್ಮೋಪದೇಶವನ್ನು ಕೇಳಿದಾಗ ಆತನಿಗೆ ಭಗವಂತನು ಕೊಡುವ ಉಪದೇಶವು—ಜಗತ್ತಿನಲ್ಲಿ ಯಾವುದು ಉತ್ತಮಂ ಮಂಗಲಂ—ಎಂಬುದು ಬಹಳ ಚಂದವಾಗಿ ಮತ್ತು ಹೃದಯಸ್ಪರ್ಶಿಯಾಗಿ ಇದೆ.

ಪ್ರಾಸಬಿಸು ಕೆಲವು ಉಪಮಾದಿ ಅಲಂಕಾರಗಳು ಹಿಂದಿನವುಗಳಂತೆ

ಚೆಲುವಾಗಿರುವವು. ಅಲಂಕಾರಗಳನ್ನು ಉಪಯೋಗಿಸುವಾಗ ಆಯಾ ವ್ಯಕ್ತಿ ಸನ್ನಿವೇಶಗಳ ಹಿನ್ನೆಲೆಯಿಂದ ಅವುಗಳನ್ನುಪಯೋಗಿಸುವುದು ರಸಿಕರ ತಲೆದೂಗಿಸದಿರದು.

೧. 'ಕಾಸಿದ ಕಾಂಚನಂ ಕೀಳನುಳಿವಂತೆ, ಆನೆ ನುಂಗಿದ ಬೇಲದಂತೆ ನಾಗಂ ತನ್ನ ಹೆರೆಯುಚ್ಚುವಂತೆ,'—ಬುದ್ಧನು ತನ್ನ ದೇಹವನ್ನು ತೊರೆದಪನು.

೨. 'ಡಿಂಡೀರಪಿಂಡದಿ ಮರಾಲ ಮಂಡಿಸಿದಂತೆ, ತೆರೆದ ರೆಪ್ಪೆಯಲಿ ಕಣ್ಣಿನ ಗೊಂಬೆ ನೆಲೆತಂತೆ,'—ಬುದ್ಧನು ಪದ್ಮಾಸನದಲ್ಲಿ ಕುಳಿತಿದ್ದನು.

೩. 'ಬರಿಯ ಕಣಜದಿ ಗೋಣಿದವಸವಂ ಸುರಿವಂತೆ, ಬಿಟ್ಟ ಬಂಡಿಗೆ ಎತ್ತುಗಳ ಹೂಡಲೆಳೆವಂತೆ, ಬಿರಿಗೈಯ ಬಣಜಿಗಗೆ ಬಂಡವಳ ವೆರೆದಂತೆ, ಪಾಂಥಗಿರುಳಲಿ ಸತ್ರತೋರ್ದಂತೆ'-ಮಲ್ಲನು ಬುದ್ಧನ ದಿವ್ಯ ವಾಣಿಯನ್ನಾಲಿಸಿ ಕೃತಕೃತ್ಯನಾದನು.

೪. 'ನೀರ ಬುದ್ಬುದದಂತೆ, ಕರೆಗುರುಳ್ದ ತೆರೆಯಂತೆ, ಉದುರ್ವ ತಾರಗೆಯಂತೆ, ಸುರಿದು ಬರಿದಹ ಮೋಡದಂತೆ, ಬತ್ತಿಯು ಮೆಣ್ಣೆಮುಗಿದ ದೀವಿಗೆಯಂತೆ, ಕ್ಷಿತಿಜದಿಂ ಸಿಡಿದ ಮಿಂಚಂಬರದೊಳೆಣೆವಂತೆ'-ಭಗವಂತನು ಪರಿನಿರ್ವಾಣ ಪಡೆದನು.

ಗೊಲ್ಗೊಥಾ ಮತ್ತು ವೈಶಾಖಿ—ಎರಡು ಕಾವ್ಯಗಳಲ್ಲಿಯೂ ಕೆಲವು ಪ್ರಸಿದ್ಧ ದೀರ್ಘೋಪಮೆಗಳಿವೆ. ಕನ್ನಡ ಲಾಕ್ಷಣಿಕರು ಹಿಂದೆ ಮಾಲೋಪಮೆಯೆಂದು ಒಂದು ಅಲಂಕಾರವನ್ನು ಹೇಳಿದ್ದರೂ ಅದನ್ನು ಆಧುನಿಕ ಆಂಗ್ಲಕಾವ್ಯಗಳ ದೀರ್ಘೋಪಮೆಯ ಮಾದರಿಯಲ್ಲಿ ಕನ್ನಡ ಸಾಹಿತ್ಯಕ್ಕೆ ತಂದವರಲ್ಲಿ ಮೊದಲಿಗರು ಶ್ರೀಮಾನ್ ಗೋವಿಂದ ಪೈಗಳು ಎನ್ನಬಹುದು. ಗೊಲ್ಗೊಥಾದಲ್ಲಿ ಬಂದಿರುವ ಕ್ರಿಶ್ಚನ್ ಪಾರಿಭಾಷಿಕ ಶಬ್ದಗಳಂತೆ ವೈಶಾಖಿಯಲ್ಲಿ ಅನೇಕ ಬೌದ್ಧ ಪಾರಿಭಾಷಿಕ ಶಬ್ದಗಳು ಬಂದಿವೆ. ಆಯಾ ಪುರಾಣಗಳ ಆಳವಾದ ಅಭ್ಯಾಸ ಕವಿಗಳಿಗಿದೆ ಎಂಬುದಕ್ಕೆ ಇವು ಸಾಕಷ್ಟು ನಿದರ್ಶನವೂ ಆಗಿವೆ.

೬

ಕೆಲವು ಕಾಲ ಹಿಂದೆ ಶ್ರೀಮಾನ್ ಗೋವಿಂದ ಪೈಗಳ 'ಸಂವಾ

ದೀಪ' ಎಂಬ ಹೆಸರಿನ ಭಾವಗೀತಗಳು ಕನ್ನಡ ನಾಡಿನ ಹಲವು ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾಗುತ್ತಾ ಇದ್ದುವು.

ನಂದಾದೀಪ ಕವನ ಮಾಲೆಯಲ್ಲಿ ಪ್ರಕಟಿತವಾದ ಕವನಗಳಿಗೆ ಆಯಾ ಕಾಲದಲ್ಲಿ ಆ ಕವನದ ಮೊದಲ ಪಂಕ್ತಿಯ ಹೆಸರನ್ನು ಕೊಟ್ಟು ಪ್ರಕಟಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಕೆಳಗೆ ಕೊಟ್ಟಿದೆ:

'ಅಂಗೋಪಾಂಗದಲಿ ನನ್ನ'
'ಆವನವಂ ಬಿಡದೆ ಬೆನ್ನ'
'ಇರುಳ ಮುನ್ನ'
'ಇನ್ನು ನೀನೆನ್ನವನು'
'ಈ ಮಾತು ನನ್ನವಲ್ಲ'
'ಈ ಜನುಮವೆ ಮುಗಿವ ಮುನ್ನ'
'ಈರಿಳೆಯ ಕಿನ್ನರಿಯು'
'ಎಲ್ಲೆಲ್ಲಿ ನಿನ್ನನರಸಿದೆ ಕಂಡೆನಿಲ್ಲ'
'ಎಲ್ಲಿಂದಕಾಲಗ್ರೀಷ್ಮಮಿದೆನ್ನ ಮನದಿ'
'ಎನಿತೊ ದಿನದಿಂ ನಿನ್ನೊಳೊಂದು'
'ಎಂದೊ ತಿಳಿಯದೊಡಂ ಸಾಗಿ'
'ಒಲ್ಲೆನಾದೊಡೆಮುರಿಯು! ಬೇಸರದ ಸೆರೆಯು'
'ಕೋರಲಾರದ ಕೋರಿಕೆಯು ಬತ್ತಿಯೆತ್ತಿ'
'ಗಗನವನಂತವಹರ್ನಿಶಂ'
'ಗೆಯ್ಮೆದಾಂಗಡ ಹೊಲ್ಲವಿಲ್ಲ'
'ಚಂದ್ರ ಚಂದ್ರಿಕೆಯಂತೆ ನಿನ್ನಿಂದಭಿನ್ನಂ'
'ನನ್ನ ಜೀವನದಾಲವಾಲದಲಿ'
'ನಾನಿಲ್ಲಿ ಬಂದೇಕೆ?'
'ನಾವೆ ನಮಗಾಗಿಸುವೆವೆಮ್ಮ ಕೋಟಲೆಯಂ'
'ನಿನ್ನ ನೆನ್ನವನೆನಗೆ'
'ನಿನ್ನ ಬೆಂಬತ್ತಿ ನಾನೊತ್ತಿಸರಿವಲ್ಲಿ'
'ನಿನ್ನ ಬೆಳಕಿನ ದಾರಿ'

‘ನಿನ್ನ ಪಡಸಾಲೆಯಲಿ’
‘ನೀನೆನ್ನವರಮೆನ್ನ ಬಾಗಿಲಿಗೆ ಬಂದಿಲ್ಲ’
‘ನೀನೆನ್ನ ಚಿಂತೆಯಲಿ ಸಂತಸಂಕಳೆಯು’
‘ಬರುವುದೆಲ್ಲಂ ತನ್ನ ಮೇಲ್ಮೆಗಂಡೆಂದು’
‘ಬಲ್ಲೆನೆ ಇಂತೊದವುತದೇಕೆ’
‘ಬಲ್ಲೆನನಗನಿತೆ ನನ್ನಳಲಲ್ಲವೆಂದು’
‘ಬೇಸಗೆ ಬೆಚ್ಚನೆ ಬೇಯುತಿದೆ’
‘ಸರ್ವಧರ್ಮವ ನೀಗಿ ಮರೆಯ ಸೇರೆನ್ನ’
‘ಸರಿಗೆಯಲಿ ಸಿಲುಕುತಿದೆ’
‘ಸಾಕಿನ್ನು ಸಾವಕಾಶಿಸುವೇಕೆ ಸಾವೆ?’
‘ಸಾಕಿವೆಲ್ಲ ಕೆಲಸವ ಲವ’
‘ಸ್ವರ್ಗ ನರಕಂಗಳಿನ್ನೆತ್ತಲೆನ್ನೊಡೆಯಾ’
‘ಹಗಲುನಂದೆ’

ಇವು ಠಾಕೂರರ ಗೀತಾಂಜಲಿಯ ಮಾದರಿಯ ಕವನಗಳು. ಈ ಕವಿತೆಗಳನ್ನು “ಸಹ ಧರ್ಮಿಣಿಯ ನೆನಪಿಗೆ ಬಾಷ್ಪಾಂಜಲಿಯಾಗಿ ತಮ್ಮನ್ನು ಅಗಲಿಸಿದ ವಿಧಾತನಿಗೆ ಶ್ರದ್ಧಾಂಜಲಿಯಾಗಿ” ರಚಿಸಿರುವುದಾಗಿ ಶ್ರೀ. ಪೈಗಳೇ ಹೇಳಿಕೊಂಡಿರುವರು. “ಅಂದು ಅವಳ ಅಗಲಿಕೆಯಿಂದ ನನ್ನಲ್ಲಿ ಹೊತ್ತಿ, ಮುಂದು ನಾನು ಇದ್ದಿರುವನಕಾ ನಂದದ ಶೋಕಾನಲದಿಂದ ದೇವರ ಮುಂದೆ ಹಚ್ಚಿರಿಸಿದ ದೀಪ ಎಂಬ ಅರ್ಥದಲ್ಲಿ ನಂದಾದೀಪ” ಎಂಬ ಹೆಸರಿನಿಂದ ಈ ಕವಿತೆಗಳನ್ನು ಅವರು ಬರೆದಿದಾರೆ. ಈ ಕವಿತೆಗಳಿಗೆ ಈ ಎರಡು ಭಾವನೆಗಳನ್ನೂ ಜೋಡಿಸಿ ಅರ್ಥ ಮಾಡಬಹುದು.

“ಸರಿಗೆಯಲಿ ಸಿಲುಕುತಿದೆ
  ಹೃದಯ ಸ್ವರಂ,
ಹೃದಯದಲಿ ಕಲುಕುತಿದೆ
  ವಿರಹಜ್ವರಂ,
ಎತ್ತನಡೆದವನೆಂದು

ಮತ್ತೆನಗೆಬಹಹನೆಂದು
ಮನಸಿ ನೋಪಂ
ಬಾಗಿಲೊಳೆ ನಿಲುಕುತಿದೆ
ನಯನ ಧೀಪಂ—''

ಸಹಧರ್ಮಿಣಿಯ ಅಗಲುವಿಕೆಯ ವಿರಹವು, ದೇವರ ಅಗಲುವಿಕೆಯು ಒಂದೇ ಏನು ಎಂಬ ಪ್ರಶ್ನೆಯನ್ನು ನಾವು ಕೇಳಬಹುದು. ಆ ಮಾತಿಗೆ ಕವಿಗಳೇ ಉತ್ತರವಿತ್ತಿದ್ದಾರೆ:

''ನಿನ್ನೊಳೆನ್ನಯ ಭಕ್ತಿ, ಅವಳೊಳನುರಕ್ತಿ;
ತೋರದನುರಕ್ತಿ ಭಕ್ತಿಯುನೆಂತು ಕಾಂಬೆ?''

ಇದೇ ಮಾತನ್ನು ಮೀರಾಬಾಯಿಯ ಮಾತಿನಿಂದ ರೂಪಗೋಸಾಯಿಯ ಕುರಿತು ಹೇಳುವಲ್ಲಿ ಹೇಳಿದ್ದಾರೆ.

ಪ್ರಪಂಚದ ಆದಿಯಿಂದ, ಪ್ರಪಂಚದ ಸೃಷ್ಟಿಗೆ ಶಾಂತಿಗೆ ಮೂಲವಾದ ಬಂದವೇದಾಂತವು ಇದೇ ಅಲ್ಲವೆ?

''ನಂದಾದೀಪ'' ಕವನಮಾಲೆ ಕವಿಯ ಜೀವವಿರುವನಕಾ ಮುಂದುವರಿಯುವುದೆಂದು ಹೇಳಿರುತ್ತಾರೆ; ಅದು ಒಳ್ಳೆಯ ಆಶ್ವಾಸನ. ಅವೆಲ್ಲವೂ ಕನ್ನಡದ ಸಾರಸ್ವತ ಸಂಪತ್ತನ್ನು ಹೆಚ್ಚಿಸುವವೆಂಬುದರಲ್ಲಿ ಏನೇನೂ ಸಂಶಯವಿಲ್ಲ.

ಶ್ರೀಕೃಷ್ಣನ ಕೊನೆಯ ದಿನದ ಕುರಿತು ಮತ್ತು ಗಾಂಧೀಜಿ ಕೊನೆಯ ದಿನದ ಕುರಿತು ಎರಡು ಖಂಡಕಾವ್ಯಗಳನ್ನವರು ಬರೆಯುತ್ತಿರುವುದಾಗಿ ತಿಳಿಯುತ್ತೇವೆ.

ಇತ್ತೀಚೆಗೆ ಹಲವು ಚತುರ್ದಶಪದಿಗಳನ್ನವರು ಬರೆದಿರುವರು. ಚತುರ್ದಶಪದಿಗಳನ್ನು ಬರೆವಲ್ಲಿ ಅವರದು ಸಿದ್ಧಹಸ್ತ; 'ಕಿರಿದರೊಳೆಪಿರಿದುಮರ್ಥಮಂ' ಅರಿಪುವಜಾಣ್ಮೆ ಅವರಂತೆ ಕನ್ನಡ ಕಾವ್ಯಲೋಕದಲ್ಲಿ ಇಂದು ಹಲವರಿಗೆ ಸಿದ್ಧಿಸಿಲ್ಲ. 'ಗಿಳಿವಿಂಡು' ಕವನ ಸಂಗ್ರಹದಲ್ಲಿ ಪ್ರಕಟವಾದ ಚತುರ್ದಶಪದಿಗಳಲ್ಲದೆ ಈ ಕೆಳಗಿನವು ಅವರು ಇತ್ತೀಚೆಗೆ ಬರೆದ ಚತುರ್ದಶಪದಿಗಳಲ್ಲಿ ಕೆಲವು:

'ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು'
'ಈ ಮಹಾಯುದ್ಧದ ನಿಜವೀರರು'

‘ಉಡುಪಿಯ ಶ್ರೀ ಕೃಷ್ಣನಿಗೆ’
‘ಎರಡು ವರ’
‘ಎಣ್ಣೆಯ ಬಟ್ಟಲು’
‘ಒಲ್ಲದ ಕೊಡಿಗೆ’
‘ಜಯ ಹಿಂದಗೀತ’
ಜೇಡನ ಬಲೆ’
‘ನವಾಖಲಿಗೆ’
“ನಾಲ್ಪ”
‘ನಿಃಸ್ವ’
‘ಬಿಡುಗಡೆಗೆ
‘ಬಿಡುಗಡೆ’
‘ಭಾರತದ ಸ್ವಾತಂತ್ರ್ಯ ಗಾಯತ್ರಿ’
‘ಮಹಾತ್ಮನ ಆತ್ಮಕ್ಕೆ’
“ಮುಗಿದ ಯುದ್ಧ”
“ಸಮುದ್ರ ಮಥನ”
“ಸುಡುಗಾಡಿನ ಸಂಪಗೆಯ ಮರಕ್ಕೆ”
“ಹಿಂದುಗಳ ಭಾಗ್ಯವಿನ್ನೆಂದು ನೀ ತೆರೆವೆ”
“ಹಿರೋಶಿಮ”

ಕನ್ನಡದಲ್ಲಿ ‘ಚತುರ್ದಶಪದಿ’ಗಳ ಯುಗವನ್ನು ಆರಂಭಿಸಿದವರೆಂದರೆ ಶ್ರೀ. ಪೈಗಳೇ ಎನ್ನಬೇಕು. ಪ್ರಾಸದ ತೊಡಕನ್ನು ಮುರಿದು ಹೊಸ ಹಾದಿ ಹಾಕಿಕೊಟ್ಟವರು ಅವರೇ ಆಗಿದ್ದಾರೆ. ನಿಜವಾಗಿ ಚತುರ್ದಶಪದಿಗಳನ್ನು ಬರೆವಲ್ಲಿ ಪ್ರಾಸದ ತೊಡಕು ಉಂಟಾಗುವುದು ಸಹಜವೇ ಆಗಿದೆ. ಹದಿನಾಲ್ಕು ಚರಣದ ವರೆಗೂ ಪ್ರಾಸವನ್ನು, ಒಂದೇ ಅಕ್ಷರವನ್ನು ಗುಣಿಸಿ ಗುಣಿಸಿ ಇಡಬೇಕು; ಹಾಗೆ ಗುಣಿಸಿ ಇಡುವುದರಿಂದ ಅರ್ಥಕ್ಕಾದರೂ ಏನು ಸ್ವಾರಸ್ಯ ಹೆಚ್ಚಿದ ಹಾಗಾಯಿತು. ಪ್ರಾಸ ಕೇವಲ ಶಬ್ದಾಲಂಕಾರ ತಾನೆ? ಹಾಗಾಗಿ ಪ್ರಾಸವನ್ನು ಬಿಟ್ಟು ಹೊಸ ಹಾದಿ ಹಾಕಿಕೊಟ್ಟರು. ಪ್ರಪಂಚದ ಇತರ ಸಾಹಿತ್ಯ ಪ್ರಾಸವನ್ನು

ಬಿಟ್ಟು ಸತ್ವ ಶಾಲಿಯಾಗಿಲ್ಲವೆ? ಕನ್ನಡವೂ ಏಕಾಗಲಾರದು? ಮೊದ ಮೊದಲು ಇಂತಹ ಸಾಹಸ ಮಾಡಿದಕ್ಕಾಗಿ ನಿಂದೆ ದೂಷಣೆಗಳು ಬಂದರೂ, ಇಂದು ಅವರ ಹಾದಿಯೇ ಸರಿಯಾದ ಹಾದಿಯಾಯಿತು. ಕನ್ನಡದ ಪ್ರಾಸದ ತ್ರಾಸ ನಿಂತು ಹೋಯಿತು; ಗಿಳಿವಿಂಡಿನ ಕೆಲವು ಕವಿತೆಗಳನ್ನು ಳಿದರೆ ಮಿಕ್ಕಾವುದರಲ್ಲಿಯೂ ಪ್ರಾಸವೇ ಇರುವುದಿಲ್ಲ. ಈ ಮಹಾ ದಿಗ್ವಿಜಯದ ವೀರಸೇನಾನಿ ಗೋವಿಂದ ಪೈಗಳೆಂಬುದನ್ನು ಕನ್ನಡ ಲೋಕ ಮರೆಯುವಂತಿಲ್ಲ.

ಶ್ರೀ ಗೋವಿಂದ ಪೈಗಳ ಪುಸ್ತಕರೂಪವಾಗಿ ಸಿಗದ ಇನ್ನೂ ಕೆಲವು ನೀಳ್ಗವಿತೆಗಳಿವೆ:

"ರನ್ನ ಮಹಾಕವಿಗೆ" ೩೫ ವೃತ್ತಗಳು

"ಶ್ರೀ ಗೋಮಟ ಜಿನಸ್ತುತಿ" ೨೭ ವೃತ್ತಗಳು

ಇವೆರಡು ಅಕ್ಷರವೃತ್ತದ ಛಂದಸ್ಸಿನಲ್ಲಿದ್ದು, ಪ್ರೌಢಿಮೆಯಿಂದ ಕೂಡಿವೆ. ಹೆಚ್ಚಾಗಿ ಹೊಸಗನ್ನಡದ ಕವಿಗಳ ಮೇಲೆ, ಅವರು ಹಳಗನ್ನಡದಲ್ಲಿ ಬರೆಯಲಾರರೆಂಬ ಅಪವಾದವಿದೆ. ಹೊಸಗನ್ನಡ ಕವಿತೆಗಳ ಮೂಲಪುರುಷ ಶ್ರೀ ಪೈಗಳು ಈ ಮೇಲಿನ ಕವನಗಳ ಮೂಲಕ ಅಂತಹ ಅಪವಾದಕ್ಕೆ ಸರಿಯಾಗಿ ಉತ್ತರವಿತ್ತಂತಾಗಿದೆ. ಹೊಸಯುಗ ಧರ್ಮಕ್ಕೆ ಸರಿಯಾಗಿ ಹೊಸ ನುಡಿಯಲ್ಲಿ ಅರ್ವಾಚೀನರು ಬರೆದರಲ್ಲದೆ, ಪ್ರಾಚೀನ ವೃತ್ತ ಛಂದಸ್ಸುಗಳನ್ನೂ ಭಾಷಾಶೈಲಿಗಳನ್ನೂ ಅಳವಡಿಸಿಕೊಳ್ಳಲಾರದೆ ಹೀಗೆ ಬರೆದರೆಂಬುದು ಸರ್ವಥಾ ಒಪ್ಪತಕ್ಕದ್ದಲ್ಲ.

ಇನ್ನುಳಿದ ಅವರ ದೀರ್ಘ ಕವನಗಳಲ್ಲಿ ಈ ಕೆಳಗಿನವು ಕೆಲವು:

'ಕಡಲಿಗೆ'

ಭಾರತಾಂಬೆಯು ಹಿರಿಮೆ,

'ಭಿಕ್ಷುವೂ ಪಕ್ಷಿಯೂ'

'ಮಾತಂಗಿ'

'ತಾರಾಪತನ'

'ತುತೂರಿ'

'ಮಿಂಚುಳ್ಳಿಗೆ'

'ಯಾರೆಂಬರು ಮುಗಿದುದೆಂದು ಬವರಂ'
'ಸಾಕು'
'ಹಳ್ಳಿಯ ಹುಡುಗಿ'
'ಹುಲ್ಲು ಕುಟಿಗ'

'ಇವುಗಳಲ್ಲಿ 'ಭಿಕ್ಷುವೂ ಪಕ್ಷಿಯೂ' 'ಮಾತಂಗಿ' 'ಹುಲ್ಲುಕುಟಿಗ' ಇವು ಮೂರು ಬೌದ್ಧಜಾತಕ ಕಥೆಗಳಿಂದಾಯ್ದು ನೇಯ್ದ ಕವಿತೆಗಳು. "ಹಳ್ಳಿಯ ಹುಡುಗಿ' ಒಂದು ವೀರ ಕಥೆ; ಯುದ್ಧರಂಗದಲ್ಲಿ ಹಿಂಜರಿದ ಗಂಡನ ಹೇಡಿತನಕ್ಕೆ ಹೇಸಿದ, 'ಹಳ್ಳಿಯ ಹುಡುಗಿ' ಮಹಿಷಾಸುರ ಮರ್ದಿನಿಯಂತಾಗಿ, ಅನಾಥೆಯಾದ ಗರ್ಭಿಣಿ ಸ್ತ್ರೀಯೋರ್ವಳಿಗೆ ಉಪಟಳ ಕೊಡುತ್ತಿದ್ದ ವ್ಲೇಂಛ ಶತ್ರುವೊಬ್ಬನನ್ನು ಕುಡುಗೋಲೆತ್ತಿ ಕೊಚ್ಚಿ ಹಾಕಿ ಕೊನೆಗೆ ಅಗ್ನಿಪ್ರವೇಶ ಮಾಡಿದ ರೋಮಾಂಚಕಾರೀ ಕಥೆ ಹಳ್ಳಿಯ ಹುಡುಗಿ ಕವಿತೆಯಲ್ಲಿದೆ. 'ತಾರಾಪತನ' ರವೀಂದ್ರರ ಬಂಗಾಳಿ ಕವನವೊಂದರ ಅನುವಾದವಾಗಿದೆ. 'ಮಿಂಚುಳ್ಳಿಗೆ' ಒಂದು ಭಾವಗೀತೆ. 'ಯಾರೆಂಬರು ಮುಗಿದುದೆಂದು ಬವರಂ' ಎಂಬುದರಲ್ಲಿ ಮಾನವನು ಕ್ಷುದ್ರವಾದ ಹೃದಯ ದೌರ್ಬಲ್ಯವನ್ನು ಬಿಟ್ಟು ಕರ್ಮರಂಗದಲ್ಲಿ ಕಾಲಿಡಬೇಕೆಂಬುದನ್ನು ಹೀಗೆ ವೀರವಾಣಿಯಿಂದ ಸಾರಿದ್ದಾರೆ:

'ಕೇಳದೆ ಜಗದೀಗೋಳಿನಕಾಳೆ'
　　ಕಳಕಳಿಸದೆ ನಿನ್ನೆದೆಯಾರ?
ನಾಳೆಯೆಂಬಜಡಗೆಂದಿಗು ನಾಳೆ
　　ಬಂದೆನೆಂಬ ಕುದುರೆಗೆ ಹಾರ!
ನೆಟ್ಟನೆರಣರಂಗದಿ ಮುಂಬರಿಯಾ
ಜಯ ಶಾಂತಿ ಎಂದಶಾಂತಿಯನಿರಿಯಾ.

ಅಶಾಂತಿಯನ್ನೆದುರಿಸಲು, ಜಗದ ಗೋಳನ್ನು ಕಳೆಯಲು, ನಾಳೆ ಮುಂದೆನ್ನದೆ ಇಂದೇ ಹೋರಾಟಕ್ಕಿಳಿದು ತನ್ನ ಕರ್ತವ್ಯವನ್ನು ಕೈಗೂಡಿಸಬೇಕೆಂಬ ಕರ್ಮಬೋಧೆ ಇದರಲ್ಲಿದೆ.

ಮೇಲಿನ ಎಲ್ಲ ಕವಿತೆಗಳು ಶಬ್ದ ಸಂಪತ್ತಿನಲ್ಲಿ ಅರ್ಥದ ಆಳದಲ್ಲಿ ಭಾವನೆಯ ಬೆಡಗಿನಲ್ಲಿ ಬಹಳ ಮೇಲ್ಮಟ್ಟದವುಗಳಾಗಿವೆ.

ಶ್ರೀ| ಪೈಗಳ ಕವಿತೆಗಳು ಬಹಳ ಕಷ್ಟವನ್ನುಂಟುಮಾಡುತ್ತವೆ ಎಂಬ ಮಾತಿದೆ; ಶಬ್ದ ಪಾಂಡಿತ್ಯವಿಲ್ಲದ, ಅರ್ಥದ ಆಳವನ್ನರಿಯದ ಅಲ್ಪವಿದ್ಯರಿಗೆ ಹೀಗಾಗುವುದು ಸಹಜವೇ ಎನ್ನಬೇಕು. ಶ್ರೀ| ಪೈಗಳ ಕವಿತೆಗಳನ್ನು ಅರ್ಥ ಮಾಡಿಕೊಳ್ಳಲು ಸ್ವಲ್ಪ ಕಷ್ಟಪಟ್ಟರೂ ಚಿಂತೆಯಿಲ್ಲ; ಒಮ್ಮೆ ಅದನ್ನು ಜೀರ್ಣಿಸಿಕೊಂಡರೆ ಆ ಕಾವ್ಯಾಮೃತ ಕೊನೆಯ ತನಕ ನಮ್ಮಲ್ಲಿ ಆನಂದದ ತೇಗನ್ನು ಹುಟ್ಟಿಸುತ್ತಿರುವದೆಂಬುದರಲ್ಲಿ ಸಂಶಯವಿಲ್ಲ.

ಶ್ರೀ| ಪೈಗಳು ತಾವು ಈ ಕಾವ್ಯಶಕ್ತಿಯನ್ನು ನಿರಂತರ ತಪೋಭಾವನೆಯಿಂದ ಆಳವಡಿಸಿಕೊಂಡಿದ್ದಾರೆ; ಅದರ ಸ್ವಾರಸ್ಯ ತಿಳಿಯಬೇಕಾದರೂ ಅಂತಹುದೇ ಸಾಧನೆಬೇಕು; ತಪಸ್ಸುಬೇಕು.

ಇವಿಷ್ಟು ಶ್ರೀ. ಗೋವಿಂದ ಪೈಗಳ ಕವನಗಳ ಸ್ಥೂಲ ಪರಿಚಯ; ಕೇವಲ ಸಿಂಹಾವಲೋಕನ; ವಿಷಯ ಪ್ರವೇಶ ಮಾತ್ರ. ಕವಿತೆಗಳ ವಿಧವಿಧಭಾವನೆ ತತ್ವ ಶೈಲಿ ಪ್ರಯೋಗಗಳ ಕುರಿತು, ಛಂದಸ್ಸು ರೀತಿ ಧಾಟಿಗಳ ಕುರಿತು ಬಲ್ಲವರು ಬರೆಯಬೇಕು. ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಅವು ಮಾರ್ಗದರ್ಶನಗಳಾಗುವವು; ಕನ್ನಡದಲ್ಲಿ ಇಂತಹ ಸಾಹಿತ್ಯದ ಕುರಿತಿರುವ ಅಭಾವವು ಅದರಿಂದ ಮಾಯವಾದೀತು.

ಪಾಶ್ಚಾತ್ಯ ಸಾಹಿತ್ಯ ಮತ್ತು ಪೌರಸ್ತ್ಯ ಸಾಹಿತ್ಯ ಇವೆರಡರ ಆಳವಾದ ಅಭ್ಯಾಸದಿಂದ ಇವೆರಡರ ಸಂಸ್ಕೃತಿಗಳ ಸುಂದರ ಸಮಾಯೋಗದಿಂದ ಕನ್ನಡದಲ್ಲಿ ಉತ್ತಮವಾದ ಕಾವ್ಯಗಳನ್ನು ಬರೆದ ಮತ್ತು ಬರೆಯಬಲ್ಲ ಮಹಾಕವಿ ಶ್ರೀಮಾನ್ ಗೋವಿಂದ ಪೈಗಳು. ಕನ್ನಡ ಸಾಹಿತ್ಯಕ್ಕೆ ಅವರು ಒಂದು ದೊಡ್ಡ ಸೊತ್ತು. ಅಂತಹ ಸೊತ್ತನ್ನು ಪಡೆದ ಕನ್ನಡಿಗರು ನಾವು ಭಾಗ್ಯಶಾಲಿಗಳು.

೭

‘ಇತಿಹಾಸಸೂತದಲಿ
　　ಕೋದಮುತ್ತಗಳ
ಸತ್ಯಮಿಥ್ಯಗಳ ಸಂ
　　ವಾದ ಬಿತ್ತುಗಳ
ತಿಂದಿಸಿಸು ತೃಪ್ತಿಯನು
　　ತೋರದೆ’—

ಇದ್ದ ಪಂಡಿತವಕ್ಕಿ, ಗೋವಿಂದ ಪೈಗಳು
ರನ್ನ ಪಂಪಾದಿಗಳ
ಕಾವ್ಯ ಕಾನನದಿ
ಉನ್ನತೋನ್ನತ ವೃಕ್ಷ
ರಾಜ ಸಂಪದದಿ
ನಿನ್ನೆಗಳ ನೆನೆನೆನೆದು'—

ಹಲಕಾಲ ಇದ್ದರು; ಇಂದಿಗೂ ಆ ಕೆಲಸ ಅವರಿಗೆ ಪ್ರಿಯವಾದ ಕೆಲಸ; ಇತಿಹಾಸ ಸಂಶೋಧನೆ ಸತ್ಯದ ಸಂಶೋಧನೆ. ಸತ್ಯದ ಸಂಶೋಧನೆಗೆ ಹೊರಟವನು ಸತ್ಯವು ಪೂರ್ಣವಾಗಿ ಹೊಳೆಯುವ ತನಕ ಸಾಗಬೇಕು. ಹೀಗೆ ಶ್ರೀ। ಪೈಗಳು ಸಂಶೋಧನೆಯ ಮಾರ್ಗದಲ್ಲಿ ಸಾಗುತ್ತಾ ಹೋಗಿದ್ದಾರೆ. ಭಾರತದ ಐತಿಹಾಸ, ಕನ್ನಡದ ಇತಿಹಾಸ ಇವೆರಡರಲ್ಲಿ ಅವರು ಎತ್ತಿದ ಕೈ! ಆಂಗ್ಲ ಕನ್ನಡ ಇವೆರಡು ಭಾಷೆಗಳಲ್ಲಿಯೂ ಅವರು ಅನೇಕ ಸಂಶೋಧನಾತ್ಮಕ ಲೇಖನ ಬರೆದಿರುವರು. ಸಂಶೋಧನಾಮಾರ್ಗದಲ್ಲಿ ಅಖಿಲಭಾರತಕೀರ್ತಿ ಪಡೆದಿರುವರು.

'ಕನ್ನಡ ಕವಿ ಚರಿತ್ರೆ'ಯನ್ನು ಸಂಗ್ರಹಿಸಿ ದಿವಂಗತ ರಾ। ನರಸಿಂಹಾಚಾರ್ಯರು ಕನ್ನಡಿಗರಿಗೆ ಬಹಳ ಉಪಕಾರ ಮಾಡಿದರು. ಆ ಕೆಲಸ ಅವರೊಬ್ಬರ ಸಾಹಸ; ಅವಸರದ ಕೆಲಸವೂ ಆಯಿತು. ಅದೇ ಆಧಾರವಾಗಿ ಕವಿಗಳ ಕಾಲವಿಚಾರ, ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಅನೇಕ ವಾದವಿವಾದಗಳೆದ್ದುವು. ಮೈಸೂರಿನ ಡಾ। ವೆಂಕಟಸುಬ್ಬಯ್ಯನವರು, ಧಾರವಾಡದ ಶ್ರೀ। ರಾಜಪುರೋಹಿತರು, ಮಂಗಳೂರಿನ ಶ್ರೀ। ಗೋವಿಂದ ಪೈಗಳು ಇವರು ಈ ವಾದದಲ್ಲಿ ಅಗ್ರಗಣ್ಯರು. ಇವರೆಲ್ಲರಲ್ಲಿಯೂ ತನ್ನ ವಾದಕ್ಕೆ, ಗ್ರಂಥಗಳ, ಶಾಸನಗಳ, ಪುರಾಣಗಳ, ಇತಿಹಾಸಗಳ ಅನೇಕ ಆಧಾರಗಳನ್ನು ಕೊಟ್ಟು, ನಿರ್ಧಾರದ ಮಾತು ಹೇಳಿದವರು ಶ್ರೀ। ಗೋವಿಂದ ಪೈಗಳಂತೆ ಬೇರೊಬ್ಬರಿಲ್ಲ. ಹಾಗಾಗಿ ಇಂದು ಕನ್ನಡದ ಕವಿಚರಿತ್ರೆಯನ್ನು ವಿದ್ಯಾರ್ಥಿಗಳಿಗೆ ಕಲಿಸುವಾಗ 'ಕವಿಚರಿತ್ರೆ', ಪುಸ್ತಕದಲ್ಲಿ ಹಾಗೆ ಹೇಳಿದ್ದರೂ, ಶ್ರೀ। ಗೋವಿಂದ ಪೈಗಳ ಅಭಿಪ್ರಾಯ ಇದು, ಎಂದು ಹೇಳದೆ ನಿರ್ವಾಹವಿಲ್ಲವಾಗಿದೆ.

ಗ್ರೀಕ್ ನಾಟಕಗಳಲ್ಲಿ ಕನ್ನಡದ ಮಾತು ಇವೆಯೆಂಬುದನ್ನು ಮೊದಲು ತಿಳಿಸಿದವರು ಶ್ರೀ| ಪೈಗಳು. ಈ ಸಂದರ್ಭದಲ್ಲಿ ಅವರು ಬಹು ಭಾಷಾಪಂಡಿತರೆಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಸ್ವತಃ ದಕ್ಷಿಣ ಕನ್ನಡ ಹಲವು ಮಾತುಗಳ ತವರೂರು. ಅವರ ಮನೆಯ ಮಾತು ಕೊಂಕಣಿ. ಹೊರಗಿನ ಮಾತು ತುಳು; ಕಲಿತದ್ದು ಕನ್ನಡ; ಅಭ್ಯಾಸ ಮಾಡಿದ್ದು ಇಂಗ್ಲಿಷ್; ಮಲೆಯಾಳ ಮನೆ ಸುತ್ತು ನಿತ್ಯ ಕೇಳುವಂತಹುದೇ! ತಮಿಳು ತಿಳಿದುಕೊಳ್ಳಲು ಇದರಿಂದ ಸುಲಭ. ಸಂಸ್ಕೃತ ಕಾವ್ಯ ಪುರಾಣ ಗಳ ಅಭ್ಯಾಸ ಅವರಿಗೆ ಚೆನ್ನಾಗಿದೆ. ಪ್ರಾಕೃತದ ಪಾಲಿ ಭಾಷೆ ಓದಿ ಬುದ್ಧ ಜಾತಕ ತಿಳಿದುಕೊಂಡಿದ್ದಾರೆ ಬಂಗಾಳಿ ಅಭ್ಯಾಸ ಮಾಡಿ ರವೀಂದ್ರ ಸಾಹಿತ್ಯ ಸವಿದಿದ್ದಾರೆ. ರಾಷ್ಟ್ರಭಾಷೆ ಹಿಂದಿ ಅವರಿಗೆ ಬರುತ್ತದೆ. ಇನ್ನು ಜರ್ಮನ್ ಮೊದಲಾದ ಹಲವು ಪಾಶ್ಚಾತ್ಯ ಭಾಷಾಭ್ಯಾಸವನ್ನು ಮಾಡಿ ಪಾರಂಗತರಾಗಿರುವರು. ಅವರ ಮನೆಯ ಹಿರಿದಾದ ಗ್ರಂಥಭಂಡಾರವೂ ಅವರು ತಮ್ಮ ಲೇಖನಗಳಿಗೆ ಆಧಾರವಾಗಿ ಕೊಡುವ ಟಿಪ್ಪಣಿಗಳೂ ಇವಕ್ಕೆ ಸಾಕ್ಷಿ. ಇಂತಹ ಅತುಲ ಸಂಪತ್ತಿನಿಂದ ಅವರು ಸಾಹಿತ್ಯ ಸಂಶೋಧನೆ ಮತ್ತು ಕವಿತಾರಂಗಗಳಲ್ಲಿ ಸವ್ಯಸಾಚಿಯಾಗಿ ಮೆರೆದಿರುವರು!

ತನ್ನ ಸಂಶೋಧನೆ ಮತ್ತು ಕವಿತಾಮಾರ್ಗಗಳ ಕುರಿತು ಅವರೇ ಒಂದು ಕಡೆ ಈ ರೀತಿಯಾಗಿ ಹೇಳಿಕೊಂಡಿದ್ದಾರೆ.

“ಕವಿತಾಮಾರ್ಗ ಬೇರೆ, ಸಂಶೋಧನದ ಮಾರ್ಗ ಬೇರೆ. ಎತ್ತು ಏರಿಗೆ ಎಳದರೆ ಕೋಣ ನೀರಿಗೆ ಎಳೆಯಿತು. ವಿಶಿಷ್ಟವಾದ ದೈವ ಕೃಪೆ ಉಳ್ಳವರು ಅವೆರಡನ್ನೂ ಕೈಯ್ಕೊಂಡು ಹೊತ್ತನ್ನು ಹಿಡಿತದಿಂದ ಬಳಸಿದರೆ ಸವ್ಯಸಾಚಿಸಬಹುದಾದರೂ ನನ್ನ ಬಗೆಗಾದರೋ ಅವು ಮುಳುವಾಗಿವೆ. ಹಾಲು ಕಾಸಲಿಕ್ಕೂ ಹುರುಳಿ ಹುರಿಯಲಿಕ್ಕೂ ಸರಿಯಾಗದೆ ಅವನ್ನು ಸವಡಿಸಲಿಕ್ಕೆ ಯತ್ನಿಸುವಲ್ಲಿ ಒಂದು ಒರೆಯುಲ್ಲಿ ಎರಡು ಕತ್ತಿಗಳನ್ನು ಸಿಕ್ಕಿಸಿಡಲಿಕ್ಕೆ ಪೇಚಾಡುತ್ತೇನೆ. ಅವಲ್ಲಿ ಒಂದೋ ಅಥವಾ ಎರಡೂ ಮುರಿಯದಿರವೆಂದು ಬಲ್ಲೆ. ಆದರೆ ಎಷ್ಟೋ ವರ್ಷಗಳಿಂದ ಅವೆರಡನ್ನು ಸಾಧಿಸುತ್ತ ಹೋದ ಮೇಲೆ ಇನ್ನು ಹೆಡಮುಟ್ಟಲಾಗುವುದಿಲ್ಲ. ಕಾಲವೂ ತಪ್ಪಿತು,

ಕಾಲೂ ತಪ್ಪಿತು. ಇನ್ನು ಈಸಿದಷ್ಟು ಈಸುವುದು, ಮತ್ತೆ ಗಂಗಾದೇವಿ ತೇಲಿಸಿಕೊಂಡು ಹೋದಲ್ಲಿ."

ಈ ವಿನಯ ಅವರ ಉನ್ನತ ವ್ಯಕ್ತಿತ್ವಕ್ಕೆ ಭೂಷಣವಾಗಿದೆ. ಆದರೆ ಈ ತಿಮಿಂಗಿಲವು ಯಾವ ಅಡ್ಡ ಪ್ರವಾಹವನ್ನೂ ಗಣಿಸದೆ, ಒಂದಿಷ್ಟೂ ಕಾಲು ತಪ್ಪದೆ, ಕ್ಷೀರಸಾಗರದ ಕಡೆಗೇ ಧಾವಿಸಬಲ್ಲುದೆಂಬುದನ್ನು ನಾವು ಇಷ್ಟು ವರ್ಷಗಳಿಂದಲೂ ಕಾಣುತ್ತಾ ಇದ್ದೇವೆ!

೯

ಬೆನ್ನ ಹಿಂದೆ ಉನ್ನತಶಿಖರದಿಂದ ಕಂಗೊಳಿಸುವ ಪಶ್ಚಿಮಾದ್ರಿ; ಕಣ್ಣಮುಂದೆ ಗಂಭೀರ ನೀಲಸಮುದ್ರ; ಇದರ ಮಧ್ಯೆ ತುಳುನಾಡಿನ ತಪೋವನದ ಭಾರ್ಗವರಂತೆ ಶ್ರೀ| ಗೋವಿಂದ ಪೈಗಳು ಮಂಜೇಶ್ವರದಲ್ಲಿ ಕಳೆದ ಅರ್ಧ ಶತಮಾನದಿಂದ ಸಾಹಿತ್ಯತಪಸ್ಸಿನಲ್ಲಿ ತೊಡಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂದರ್ಶಿಸಿದ ಯಾವನೇ ಕನ್ನಡಿಗನಾದರೂ ಮಂಜೇಶ್ವರಕ್ಕೆ ಬಂದು, ಶ್ರೀ| ಪೈಗಳನ್ನು ಕಾಣದೆ ಹೋಗುವಂತಿಲ್ಲ. ಕಂಡು ಮಾತನಾಡಿ ಹೋದವನು ಅವರ ವ್ಯಕ್ತಿತ್ವವನ್ನು ಮತ್ತೆ ಮರೆಯುವಂತಿಲ್ಲ. ಶ್ರೀ| ಪೈಗಳು ಏಕಾಂಗಿಯಾಗಿ ಏಕಧ್ಯಾನದಲ್ಲಿ ಈ ಸಾಧನೆಯಲ್ಲಿ ತೊಡಗಿದವರು. ಅವರು ತಮ್ಮ ಗುಂಪುಕಟ್ಟಿಕೊಳ್ಳಲಿಲ್ಲ. ಅವರಿಗೆ ಗುಂಪು ಬೇಕಾಗಿಲ್ಲ. ಹಾಗಾಗಿ ಇಂದು ಗುಂಪಿಗೆ ಅವರು ಬೇಕಾದರು; ಅವರು ಕೀರ್ತಿಯನ್ನು ಹಾರೈಸಲಿಲ್ಲ; ಕೀರ್ತಿ ಅವರನ್ನು ಅರಸಿ ಬಂತು. ಇಂದಿಗೆ ಅವರೇ ಒಂದು ಸಂಸ್ಥೆಯಾಗಿದ್ದಾರೆ. ಅವರು ಕನ್ನಡದ ದೊಡ್ಡ ಸಂಪತ್ತು ಆಗಿದ್ದಾರೆ. ಕನ್ನಡಿಗರ ಪುಣ್ಯಕ್ಷೇತ್ರವಾಗಿದ್ದಾರೆ.

ಅರ್ಪಿತವಾದ ಅಖಿಲಕರ್ನಾಟಕ ಸಾಹಿತ್ಯಪರಿಷತ್ತಿನ ಅಧ್ಯಕ್ಷಪೀಠವನ್ನು ಅನೇಕ ಸಲ ಅವರು ಒಲ್ಲೆನೆಂದರು. ಅವರ ಸ್ವತಂತ್ರ ಪ್ರಕೃತಿಗೆ ಅದು ಹಿಡಿಸದು. ಅವರ ಸಾಹಿತ್ಯತಪಸ್ಸಿಗೆ ಅದರಿಂದ ತೊಂದರೆಯಾಗಬಹುದೆಂದು ತಿಳಿದರೋ ಏನೋ! ಅಂತೂ ಅವರು ಬಹುಕಾಲ ಒಪ್ಪಲೇ ಇಲ್ಲ ಅವರನ್ನು ರಾಷ್ಟ್ರಕವಿಯಾಗಲು ಒಪ್ಪಿಸುವ ಸಂದರ್ಭವೂ ಅಂತಹುದೇ ಆಗಿತ್ತು. ಅವರು ಅದನ್ನೂ ಒಲ್ಲೆನೆಂದಿದ್ದರು. ಆದರೆ

ಅವರು ಒಪ್ಪುವುದು ಜನತೆಗೆ ಬೇಕಾಗಿತ್ತು. ಕೊನೆಗೆ ಜನತೆಯ ಆಕಾಂಕ್ಷೆಯನ್ನು ಅವರು ಅಲ್ಲಗಳೆಯಲಾರದಾದರು. ಇಂದು ಸಾಹಿತ್ಯಪರಿಷದ್ಯಕ್ಷ ಪೀಠವನ್ನು ಅಲಂಕರಿಸಲಿಕ್ಕೂ ಒಪ್ಪಿಕೊಂಡಿದ್ದಾರೆ. ಕನ್ನಡದ ಇಂದಿನ ತಲೆಮಾರಿನ ಈ ಹಿರಿಯರನ್ನು ಈ ಕಾರ್ಯಕ್ಕೆ ಒಪ್ಪಿಸಿದ ಸಾಹಿತ್ಯಪರಿಷತ್ತಿನ ಅಧಿಕಾರಿಗಳು ಬಹು ಭಾಗ್ಯವಂತರು. ಈ ರೂಪದಲ್ಲಿ ಅವರ ದರ್ಶನವನ್ನು ಪಡೆಯುವ ಕನ್ನಡಿಗರೂ ಭಾಗ್ಯವಂತರೇ!

ಶ್ರೀ। ಗೋವಿಂದ ಪೈಗಳು ಮಂಜೇಶ್ವರದವರೆಂದು ಪ್ರಸಿದ್ಧಿ; ಆದರೆ ಅವರು ನಿಜವಾಗಿ ಮಂಗಳೂರು ಗೋವಿಂದ ಪೈಗಳು. ಹೆಸರಿನ ಮೊದಲು ಬರುವ ಎಂ. ಅಥವಾ ಮಂ.. ಎಂಬುದು ಮಂಗಳೂರು, ಮಂಜೇಶ್ವರ ಎರಡಕ್ಕೂ ಸಮಾನವಾಗಿಯೇ ಅನ್ವಯಿಸುತ್ತದೆ. ಹಾಗೆಯೇ ಅವರಿಗೆ ಮಂಗಳೂರು ಮಂಜೇಶ್ವರ ಎರಡೂ ಮನೆಗಳಾಗಿವೆ. ಮಂಗಳೂರು ತಂದೆಯ ಪರಂಪರೆಯಿಂದ ಇರುವ ಮನೆ, ಮಂಜೇಶ್ವರ ತಾಯಿಯ ಪರಂಪರೆಯಿಂದ ಆಗಿರುವ ಮನೆ. ಅವರ ತಾಯಿಯ ಹಿರಿಯರು ಮಂಜೇಶ್ವರದ ಮನೆಗೆ ಅವರನ್ನು ದತ್ತಕ್ಕೆ ಸ್ವೀಕರಿಸಿಕೊಂಡ ಕಾರಣ ಅವರು ಅಲ್ಲಿ, ಅವರ ತಮ್ಮಂದಿರೊಡನೆ, ತಮ್ಮಂದಿರ ಮಕ್ಕಳೊಡನೆ ವಾಸವಾಗಿರುತ್ತಾರೆ.

ಇವರ ಹಿರಿಯರು ಗೋವೆಯಿಂದ ಇಲ್ಲಿಗೆ ವಲಸೆ ಬಂದವರು. ಹಿಂದೆ ಮತಾಂಧರಾದ ವಿದೇಶೀ ಮಿಶನರಿಗಳ ಚಿತ್ರಹಿಂಸೆಗೆ ತುತ್ತಾದ ಗೋವೆಯ ಹಿಂದುಗಳು ತಮ್ಮ ಪ್ರಾಣ ಮಾನ ರಕ್ಷಣೆಗಾಗಿ ಅಲ್ಲಿಂದ ಓಡಿ ಹೋಗಬೇಕಾಯಿತು. ಅವರಲ್ಲಿ ಹೆಚ್ಚಿನವರು ಪಶ್ಚಿಮ ಕರಾವಳಿಯಲ್ಲಿಯೇ ಬಂದು ವಾಸಿಸಿದರು. ದಕ್ಷಿಣ ಕನ್ನಡಕ್ಕೂ ಹಲವರು ಬಂದರು; ವ್ಯಾಪಾರ ವಹಿವಾಟುಗಳಲ್ಲಿ ಕುಶಲರಾದ ಅವರು ಕರಾವಳಿಯಲ್ಲಿ ಬಂದು ನೆಲಸಿ ಅಭಿವೃದ್ಧಿ ಹೊಂದಿದರು; ಶ್ರೀ। ಪೈಗಳೂ ಶ್ರೀಮಂತರೇ ಆಗಿರುವರು.

ಶ್ರೀ। ಗೋವಿಂದ ಪೈಗಳು ಜನ್ಮತಃ ಜೀವನತಃ ಸರಸ್ವತೀ ಕೃಪಾಪಾತ್ರರು. ಇವರ ಮೂಲಪುರುಷರು ಸರಸ್ವತೀನದಿಯ ದಂಡೆಯಿಂದ ಬಂದವರೆಂಬುದರಿಂದ ಸಾರಸ್ವತರೆಂಬ ಹೆಸರು ಬಂತೆಂದು ಹೇಳುತ್ತಾರೆ. ಸರಸ್ವತಿಯ ವರಪುತ್ರರೆಂಬುದರಿಂದ ಶ್ರೀ। ಪೈಗಳು ಸಾರಸ್ವತರೇ ಆಗಿದ್ದಾರೆ.

ಶ್ರೀ। ಪೈಗಳ ಪತ್ನಿ ಹರೆಯದಲ್ಲಿಯೇ ತೀರಿಹೋಗಿದ್ದರು. ಅವರಿಗೆ ಸ್ವತಃ

ಮಕ್ಕಳಿಲ್ಲ; ಅವರ ತಮ್ಮಂದಿರು, ತಮ್ಮಂದಿರ ಮಕ್ಕಳು ಇವರಿಂದ ಕೂಡಿದ ತುಂಬುಸಂಸಾರದ ಜೀವನ ಅವರದು. ಅವರೆಲ್ಲರನ್ನೂ ಪೈಗಳು ಮಕ್ಕಳಂತೆ ನೋಡಿಕೊಳ್ಳುತ್ತಾರೆ. ಒಬ್ಬ ಯಃಕಶ್ಚಿತ್ ಕನ್ನಡ ಯಾತ್ರಿಕನಾದರೂ ಪೈಗಳ ಸಂದರ್ಶನಕ್ಕಾಗಿ ಬಂದರೆ ಅವರಿಗೆ ಸವಿನಯ ತಿಂಡಿತೀರ್ಥ ಕೊಟ್ಟು ಆದರಿಸುತ್ತಾರೆ; ಹೊಟ್ಟೆ ತುಂಬಿಸುತ್ತಾರೆ. ಪೈಗಳು ಸಾಹಿತ್ಯದ ರಸದೂಟವನ್ನೂ ಒದಗಿಸುತ್ತಾರೆ.

ಶ್ರೀ| ಗೋವಿಂದ ಪೈಗಳೊಡನೆ ಸಂಭಾಷಣೆ ನಿಜವಾಗಿ ಒಂದು ರಸದೂಟ; ಪ್ರಪಂಚದ ಯಾವುದೇ ವಿಷಯವನ್ನೆತ್ತಿಕೊಂಡರೂ ಒಂದು ಅಧಿಕಾರವಾಣಿಯಿಂದ ಅವರು ಮಾತನಾಡಬಲ್ಲರು; ಅಂಕೆಸಂಖ್ಯೆಗಳಿಂದ ರುಜು ಮಾಡುವರು. ಇದಿರಿನಲ್ಲಿ ಭೋರ್ಗರೆಯುತ್ತಿರುವ ಗಂಭೀರಸಾಗರದ ನಿರ್ಘೋಷದೊಂದಿಗೆ ತನ್ನ ಕಂಠವನ್ನು ಮೇಳೈಸಿ ಮಾತಾಡುವರು. ಅವರೊಡನೆ ಸಂಭಾಷಣೆ ಮಾಡುವಾಗ, ಮಧ್ಯೆ, ನಮ್ಮ ಅಪಸ್ವರ ಸೇರಿಸಲು ನಮಗೇ ಹಿತವಾಗಲಾರದು. ಅವರದೇ ಮಾತು ಕೇಳಬೇಕೆಂದು ಆಸೆ ಹೆಚ್ಚುವುದು. ಅವರಿಗಾದರೂ ಬಂದವರೊಡನೆ ಬಿಚ್ಚು ಮನಸ್ಸಿನಿಂದ ಮಾತನಾಡುವ, ಮಾತಿನಿಂದ ಮೈಮರೆಸುವ ಕಲೆ ಸರಿಯಾಗಿ ಸಿದ್ಧಿಸಿದೆ.

ಹೆಚ್ಚಾಗಿ ಅವರಲ್ಲಿಗೆ ಹೋಗುವವರು ಯಾವುದಾದರೊಂದು ಕಷ್ಟದ ಸಮಸ್ಯೆಯನ್ನು ಹೊತ್ತುಕೊಂಡೇ ಹೋಗುತ್ತಾರೆ. ಯಾವುದಾದರೂ ಕಠಿಣ ಕಾವ್ಯದ ಅರ್ಥ, ಯಾವನಾದರೊಬ್ಬ ಕವಿಯ ಕಾಲ ವಿಚಾರ, ಇನ್ನಾವುದಾದರೊಂದು ಐತಿಹಾಸಿಕ ವಿಷಯ ಇಂತಹುದೇ ಪ್ರಶ್ನೆಗಳಿಗೆ ಅವರು ಉತ್ತರ ಕೊಡಬೇಕಾಗುತ್ತದೆ; ಹೋದವನ ತಲೆಯ ಹೊರೆಯನ್ನಿಳಿಸಿ, ಅವರು ಕಳುಹಿಸುತ್ತಾರೆ; ಕನ್ನಡ ಒಂದು ಮಹಾಜೀವಂತವಿಶ್ವಕೋಶವಾಗಿ ಶ್ರೀ| ಗೋವಿಂದ ಪೈಗಳು ಇಂದು ನಮ್ಮ ಕಣ್ಣ ಮುಂದೆ ಇದ್ದಾರೆ.

ನಮ್ಮ ಜಿಲ್ಲೆ-ದಕ್ಷಿಣ ಕನ್ನಡ ಜಿಲ್ಲೆ, ಒಬ್ಬ ರತ್ನಾಕರವರ್ಣಿಯನ್ನು ಪಡೆಯಿತು; ಒಬ್ಬ ಪಾರ್ತಿಸುಬ್ಬನನ್ನು ಜೋಗುಳಿಸಿತು; ಒಬ್ಬ ಮುದ್ದಣನನ್ನು ಲಾಲಿಸಿತು; ಒಬ್ಬ ಪಂಜೆಯನ್ನು ಪಾಲಿಸಿತು; ಒಬ್ಬರು ಗೋವಿಂದ ಪೈಗಳನ್ನು ಹರಸಿತು!

ಈ ಹೆಮ್ಮೆ ನಮ್ಮದು! ಈ ಹೆಮ್ಮೆ ಕನ್ನಡಿಗರದು!

PRINTED AT
NAVABHARAT PRESS,
MANGALORE.

Published by the Author, P.O. PERDALA,
S.K.

ಪರಾಮರ್ಶೆಗಾಗಿ

ಕಯ್ಯಾರರ ಇತರ ಕೃತಿಗಳು:

ಶ್ರೀಮುಖ
(ಕವನ ಸಂಗ್ರಹ)

ಐಕ್ಯಗಾನ
(ಕವನ ಸಂಗ್ರಹ)

ಪದ್ಯಮಂಜರಿ
(ಎರಡು ಭಾಗಗಳು)

ರತ್ನರಾಶಿ
(ಜೀವನ ಚರಿತ್ರೆಗಳು)

ಅನ್ನದೇವರು ಮತ್ತು ಇತರ
ಕಥೆಗಳು
(ಕಥಾಸಂಗ್ರಹ)

ವ್ಯಾಕರಣ ಮತ್ತು ಪ್ರಬಂಧ
(ನಾಲ್ಕು ಪುಸ್ತಕಗಳು)

ವಿರಾಗಿಣಿ
(ಏಕಾಂಕ ನಾಟಕ)